# 41

# ಬಾಗಿಲು ಮುಚ್ಚುವವರು

# (15:1-31)

ನಾನು ನನ್ನ ವಾಹನವನ್ನು ಚಾಲನೆ ಮಾಡುತ್ತಾ ನಾನು ಹೋಗಿಸೇರ ಬೇಕಾದ ಗುರಿಯ ಕುರಿತು ಯೋಚಿಸುವಾಗ, ನಾನು ಇದ್ದ ಸ್ಥಳವನ್ನೇ ಮರೆತ್ತಿದ್ದೇನು - ನನ್ನ ವಾಹನವು ಒಂದು ದಿಬ್ಬವನ್ನು ಏರಿ ಕೆಳಗೆ ಇಳಿದಾಗ, ಒಳಗಿದ್ದ ನಾನು ಕಾರಿನ ಮೆಲ್ಚಾವಣಿಯವರೆಗೂ ಏರಿ ಹೋಗಿದ್ದೇನು. ನಾನು ನನ್ನ ಆಲೋಚನೆಗೆ ಹಿಂದಿರುಗುವಾಗ, ನಾನು ಒಂದು ಶಾಲೆಯ ಮುಂದೆ ಇದ್ದೆನು, ಶಾಲೆಯ ಸಿಬ್ಬಂದಿಗಳು ರಸ್ತೆಯಲ್ಲಿ ಒಂದು ದಿಬ್ಬವಿರುವ ರಸ್ತೆ ತಡೆಯನ್ನು[1] ನಿರ್ಮಿಸಿದ್ದರು. ವಿದ್ಯಾರ್ಥಿಗಳ ಸುರಕ್ಷೆಗಾಗಿ, ಆ ರಸ್ತೆ ತಡೆಯನ್ನು ನಿರ್ಮಿಸಲಾಗಿತ್ತು.[2] ನಾನು ಅಪೊಸ್ತಲರ ಕೃತ್ಯಗಳು 15ನ್ನು ಓದುವಾಗ, ಆ ರಸ್ತೆ ತಡೆಯಿಂದಾದ ಅನುಭವವನ್ನೇ ನಾನು ಅನುಭವಿಸಿದೆನು. ಪೌಲನು ತನ್ನ ಸೇವಾ ಪ್ರಯಾಣವನ್ನು ಪ್ರಾರಂಭಿಸುವದಕ್ಕೆ ಸಿದ್ದನಾಗಿದ್ದನು; ಅವನು ಒಂದು ನೂತನ ಸ್ಥಳಕ್ಕೆ ಹೋಗಿ ಅದ್ಭುತವಾದ ಸೇವೆಯನ್ನು ಮಾಡುವದಕ್ಕಿದ್ದನು ಎಂದು ನಾನು ನನ್ನ ಮನಸ್ಸಿನಲ್ಲಿ ಅಂದುಕೊಂಡಿದ್ದೆನು. ಆದರೆ ಲೂಕನು ಸಭೆಯಲ್ಲಿ ಉಂಟಾದ ವಿಷಯಗಳ ಕುರಿತು ರಸ್ತೆ ತಡೆಯಂತಹ ತಡೆಯನ್ನು ಪೌಲನಿಗೆ ಒಡ್ಡಿದನು, ಅಲ್ಲಿ ಉಂಟಾದ ಸಭೆಯ ಘರ್ಷಣೆಯು ನನಗೆ ಸಂಬಂಧ ಪಟ್ಟಿರುವದಿಲ್ಲ ಎಂದು ನಾನು ತಿಳಿದಿದ್ದೇನು.

ವರ್ಷಗಳು ಕಳೆದು ಹೋದಂತೆ, ಅಪೊಸ್ತಲರ ಕೃತ್ಯಗಳು 15ರ ಲೆಕ್ಕಾಚಾರವು ಉತ್ತಮವಾಗುತ್ತಿದೆ. ಅಧ್ಯಾಯದ ಪ್ರಥಮ ಭಾಗದಲ್ಲಿರುವ ಅಂಶವು *ಪ್ರಮುಖವಾದದ್ದು* ಎಂದು ಲೂಕನು ಆ ಸಾಕ್ಷಾಧಾರಗಳಿಗೆ ಸಮರ್ಪಿಸಿಕೊಂಡಿರುವನು. ಅಲ್ಲಿ ಉಂಟಾಗಿರುವ ಸಮಸ್ಯೆಯನ್ನು ಪರಿಹರಿಸಿಕೊಳ್ಳದ ಹೊರತು, ಸೇವಾ ಪ್ರಯಾಣವು ಅಸಾಧ್ಯವಾಗುತ್ತದೆ! ಅಲ್ಲಿ ಉಂಟಾದ ಘಟನೆಗಳು ನನಗೂ ಸಂಬಂಧ ಪಟ್ಟಿವೆ - ಅದು ನನ್ನ ರಕ್ಷಣೆಗೂ ಸಂಬಂಧ ಪಟ್ಟಿರುತ್ತದೆ ಸಭೆಗಳಲ್ಲಿ ಉದ್ಭವಿಸಿದ ಅನೇಕ ಕೆಟ್ಟ ಘಟನೆಗಳನ್ನು ನಾನು ನೋಡಿರುತ್ತೇನೆ. ಆದರೆ ಅದನ್ನು ಅಪೊಸ್ತಲರ ಕೃತ್ಯಗಳು 15ಕ್ಕೆ ಹೋಲಿಸಿದರೆ, ಅವುಗಳು ಹಗುರವಾದವುಗಳೇ.

ಅಧ್ಯಾಯ 14ರ ಅಂತ್ಯದಲ್ಲಿ, ಪೌಲ ಬಾರ್ನಬರು ಪ್ರಯಾಣಮಾಡಿ ಅತ್ಯಾನಂದದಿಂದ ಹಿಂತಿರುಗಿದರು. “ದೇವರು ಅನ್ಯಜನರಿಗೆ ನಂಬಿಕೆಯ ಬಾಗಿಲನ್ನು ತೆರೆದದ್ದನ್ನು” ವಿವರವಾಗಿ ತಿಳಿಸಿದರು (14:27) - ಪಿಸಿದ್ಯದ ಅಂತಿಯೋಕ್ಯ ಇಕೋನಿಯಾ,[3] ಲುಸ್ತ್ರ ಮತ್ತು ದರ್ಬೆಯಲ್ಲಿ ಅನ್ಯರ ಸಭೆಗಳು ಸ್ಥಾಪಿತಗೊಂಡವು (14:20, 21, 23).[4] ಮತ್ತು ಅನ್ಯರಾದ ಅನೇಕರು ಕ್ರೈಸ್ತರಾದರು (14:1, 21)! ದೂರದಲ್ಲಿದ್ದಂತ ಅನ್ಯರು ಸುವಾರ್ತೆಗೆ ಒಳಪಟ್ಟರು ಎಂಬುದನ್ನು ಪೌಲ ಬಾರ್ನಬರು ತೋರಿಸಿಕೊಟ್ಟರು! ನಾಶವಾದ ಪ್ರಪಂಚವು ಕಾಯುತ್ತಿತ್ತು; ಆತ್ಮಗಳ ಅಧಿಕ ಸುಗ್ಗಿಯು ಸಿದ್ಧವಾಗುತ್ತಿತ್ತು! ನಿಶ್ಚಯವಾಗಿ ಪ್ರತಿಯೊಬ್ಬ ಕ್ರೈಸ್ತನು ಆನಂದಿಸುತ್ತಿದ್ದನು! ಆದರೆ, “ಕರ್ತನು ಅನ್ಯ ಜನರಿಗೆ ನಂಬಿಕೆಯ ಬಾಗಿಲನ್ನು ತೆರೆದ” ವಿಚಾರವಾಗಿ ಎಲ್ಲರೂ ಸಂತೋಷಪಡಲಿಲ್ಲ. ಕೆಲವರು ಅಂತಿಯೋಕ್ಯಕ್ಕೆ ಬಂದು ಆ ಬಾಗಿಲನ್ನು ಮುಚ್ಚುವ[5] ನಿರ್ಣಯವನ್ನು ಮಾಡುವಲ್ಲಿ ನಿಧಾನಿಸಲಿಲ್ಲ. ಅಪೊಸ್ತಲರ ಕೃತ್ಯಗಳು 15ರ ಪಾಠದಲ್ಲಿ ಬಾಗಿಲು - ಮುಚ್ಚುವವರ ಕುರಿತು ಮತ್ತು ಈ ದಿನಗಳಲ್ಲಿರುವ ಬಾಗಿಲನ್ನು ಮುಚ್ಚುವವರ ಕುರಿತಾಗಿಯೂ ವಿವರಿಸಲಾಗುವದು.

ನಮ್ಮ ಪಾಠವನ್ನು ಮುಂದುವರಿಸುವ ಮೊದಲು, ಗಲಾತ್ಯ ಪುಸ್ತಕದಲ್ಲಿಯೂ

ತಿಳಿಸಲಾಗಿರುವ ಭಿನ್ನಾಭಿಪ್ರಾಯದ ಕುರಿತು ನಾವುಗಳು ತಿಳಿಯುವ ಸಾಧ್ಯತೆಯಿದೆ. ಸಾಂಪ್ರದಾಯಕ ಪಂಡಿತರುಗಳು ಅಪೊಸ್ತಲರ ಕೃತ್ಯಗಳು 15:1-35ರ[6] ವರೆಗಿನ ಘಟನೆಯನ್ನು ಗಲಾತ್ಯ 2:1-10ರವರೆಗಿನ ಘಟನೆಗೆ ಹೋಲಿಸುವರು. ಒಬ್ಬ ಬರಹಗಾರನು ತಿಳಿಸಿರುವಂತೆ "ಈ ಎರಡು ವಿವರಣೆಗಳಲ್ಲಿ ಒಂದೇ ಗುಂಪಿನ ಜನರು ಒಂದೇ ಸಮಯದಲ್ಲಿ, ಒಂದೇ ವಿಷಯಕ್ಕಾಗಿ ಒಂದೇ ಸ್ಥಳದಿಂದ ಹೊರಡುವರು. ಈ ಎರಡು ಘಟನೆಗಳಲ್ಲಿ ಒಂದೇ ಗುಂಪಿನ ವಿರೋಧಿಗಳು ಮತ್ತು ಒಂದೇ ಪರಿಣಾಮವನ್ನು ನೀಡಿದರು"[7] ಆ ಎರಡೂ ಸಮಸ್ಯೆಗಳನ್ನು ಪರಿಹರಿಸಲು ಅನೇಕ ಸಮಸ್ಯೆಗಳು ಅಡ್ಡಿಯಾಗಿದ್ದವು,[8] ಗಲಾತ್ಯ 2ರಲ್ಲಿ ಘಟನೆಯನ್ನು ಇರಿಸುವ ಸ್ಥಳದಲ್ಲಿ ಸಮಸ್ಯೆಯು ಉದ್ಭವಿಸುತ್ತದೆ. ಈ ಎರಡೂ ಘಟನೆಗಳು ಒಂದೇ ಕಾರ್ಯವನ್ನು ತೋರಿದರೂ ಅಪೊಸ್ತಲರ ಕೃತ್ಯಗಳ 15ರ ಅಧ್ಯಯನದಲ್ಲಿ ಗಲಾತ್ಯ 2ನ್ನು ಸೇರ್ಪಡೆ ಮಾಡಿಕೊಳ್ಳೋಣ.[9]

## ಹಿಂದಿನ ದಿವಸಗಳಲ್ಲಿದ್ದ – ಬಾಗಿಲು ಮುಚ್ಚುವವರು

**ಘರ್ಷಣೆ (15:1-3)**

ತಮ್ಮ ಮೊದಲ ಪ್ರಯಾಣವನ್ನು ಮುಗಿಸಿದ ನಂತರ, ಪೌಲ ಬಾರ್ನಬರು "ಬಹುಕಾಲ" ಅಂತಿಯೋಕ್ಯದಲ್ಲಿ ಸೇವೆ ಮಾಡಿದರು (14:28), ಅವರ ಕಾರ್ಯಗಳ ಸಮಾಚಾರವು ಯೆರೂಸಲೇಮಿನವರಿಗೆ ತಿಳಿದು ಬರಲು[10] - ಕೆಲವು ಯೆಹೂದ್ಯರು ಗೊಂದಲಕ್ಕೊಳಗಾದರು. ಅನ್ಯರಿಗೆ ಸುವಾರ್ತೆಯನ್ನು ಸಾರುವ ವಿಷಯದ ಕುರಿತ ತರ್ಕವು ಹತ್ತು ವರ್ಷಗಳ ಹಿಂದೆಯೇ ಪ್ರಾರಂಭವಾಗಿತ್ತು. ಪೇತ್ರನು ಕೊರ್ನೇಲಿಯನನ್ನು ಕ್ರೈಸ್ತನನ್ನಾಗಿ ಪರಿವರ್ತಿಸಿದಾಗಲೇ ಈ ತರ್ಕವು ಅಂತ್ಯಗೊಂಡಿತ್ತು (11:1-18). ಸ್ವಾಭಾವಿಕವಾಗಿ, ಸಿರಿಯದ ಅಂತಿಯೋಕ್ಯದಲ್ಲಿ ಅನ್ಯರ ಸಭೆಗಳು ವೃದ್ಧಿಗೊಳ್ಳುವಾಗ, ಯೆರೂಸಲೇಮಿನ ಸಭೆಯವರು, ಅವರ ಸಹಾಯಕ್ಕಾಗಿ ಬಾರ್ನಬನನ್ನು ಸಹ ಕಳುಹಿಸಿದ್ದರು (11:20-22) - ಆ ಕೆಲಸವನ್ನು ಆಶೀರ್ವದಿಸಿದರು ಎಂಬ ಅರ್ಥವಾಗಿದೆ.

ಪೌಲ ಬಾರ್ನಬರ ಪ್ರಯತ್ನಗಳು, ಹಳೆಯ ಭಯವನ್ನು ಪುನರಾವರ್ತನೆ ಮಾಡಿತು. ಯೆಹೂದ್ಯರಿಗಿಂತಲೂ, ಅನ್ಯರು ವಾಕ್ಯಕ್ಕೆ ಹೆಚ್ಚಿನ ಮನ್ನಣೆಯನ್ನು ನೀಡಿದ್ದರಿಂದ ಲೋಕ ದಲ್ಲಿದ್ದ ಪ್ರತಿಯೊಬ್ಬ ಯೆಹೂದ್ಯನಿಗೆ, ಅನೇಕ ಅನ್ಯರು ಕರ್ತನ ಕಡೆಗೆ ತಿರುಗಿಕೊಂಡಿದ್ದರು. ಸಭೆಗಳು ಅನ್ಯರಿಂದ ತುಂಬಿತುಳುಕುವದನ್ನು ಅನೇಕರು ಕಂಡಿದ್ದರು. ಅನ್ಯರು ತಮ್ಮ ಅನ್ಯ ಸಂಸ್ಕೃತಿಯಿಂದಲೂ - ಅನ್ಯ ಮನಸ್ಸನ್ನು ಹೊಂದಿದ್ದರಿಂದಲೂ ಅನ್ಯ ಸಂಪ್ರದಾಯಗಳನ್ನು ಆಚರಿಸುತ್ತಿದ್ದರಿಂದಲೂ, ಅವರು ಮರಣಕ್ಕೆ ತುತ್ತಾಗಬಹುದೆಂಬ ಭಯವನ್ನು ಸಹ ಹೊಂದಿದ್ದರು![11] ಅವರು ತಪ್ಪಾದ ಸಿದ್ಧಾಂತಗಳಿಗೆ ಹೋಗುವ ಮೊದಲು,[12] ಹಾಗೂ ಅವರ ಅನ್ಯೋನ್ಯತೆಗೆ ಸೇರಿಸಿಕೊಳ್ಳುವ ಮೊದಲು, ಅವರನ್ನು ತಿದ್ದುವ ಅಗತ್ಯತೆಯಿತ್ತು.

ಕೆಲವರಲ್ಲಿ, ಸಹಜವಾದ ಉತ್ತರಗಳಿದ್ದವು: ಅನ್ಯರಿಗೆ ಅಗತ್ಯವಿರುವದೇ ಅನ್ಯರಿಗೆ ಅಗತ್ಯವಿತ್ತು; ಅವರು ಯೆಹೂದ್ಯರಾಗುವ ಅಗತ್ಯತೆಯಿತ್ತು! ಮೋಶೆಯ ಧರ್ಮಶಾಸ್ತ್ರವು ಅನ್ಯರನ್ನು ನಯ ಮಾಡುವದಿತ್ತು ಅದು ಅವರ ಕಠಿಣತೆಯನ್ನು ನಯ ಮಾಡುವದರಿಂದ, ಧರ್ಮಶಾಸ್ತ್ರಕ್ಕೆ ಒಳಗಾದ ಯೆಹೂದ್ಯ ಕ್ರೈಸ್ತರು ಅವರ ಸಾನಿಧ್ಯವನ್ನು ಅಂಗೀಕರಿಸಲು ಸಾಧ್ಯವಾಗುತಿತ್ತು. (ಕೊರ್ನೇಲ್ಯನ ಪರಿವರ್ತನೆಯ ಕುರಿತು ಗೊಂದಲಕೊಳ್ಳಗಾದವರು [11:2, 3] "ಸುನ್ನತಿಯಿಲ್ಲದವರನ್ನು ಅಂಗೀಕರಿಸುವದರಿಂದ ಯಾವುದೇ ಒಳ್ಳೆಯದು ಉಂಟಾಗುವದಿಲ್ಲ, ಈಗ ಅದರಿಂದ ನಾಶನವು ಉಂಟಾಯಿತು ಎಂದು ಹೇಳಿರಬಹುದೆಂದು ನಾನು ಊಹಿಸುತ್ತೇನೆ!")

ಅನ್ಯರಿಗೆ ಸುವಾರ್ತೆಸಾರಲ್ಪಡುತ್ತಿದ್ದ ಸ್ಥಳದಲ್ಲಿ "ಅಪಾಯ" ಉಂಟುಮಾಡುವದೇ

ಯೆಹೂದ್ಯರ ಸಹಜವಾದ ಪ್ರತಿಕ್ರಿಯೆಯಾಗಿತ್ತು, ಅಂತಿಯೋಕ್ಯ ಸಭೆಯವರೆ ಪೌಲ ಬಾರ್ನಬರನ್ನು ಅಲ್ಲಿ ಸೇವೆಗೆ ಕಳುಹಿಸಿಕೊಟ್ಟಿದ್ದರು. ನಾವು ಓದುವಂತೆ "ಬಳಿಕ ಕೆಲವರು ಯೂದಾಯದಿಂದ [ಅಂತಿಯೋಕ್ಯಕ್ಕೆ ಬಂದು], ನೀವು ಮೋಶೆಯ ಗ್ರಂಥದಲ್ಲಿ ಹೇಳಿರುವ ನೇಮದ ಪ್ರಕಾರ ಸುನ್ನತಿ ಮಾಡಿಸಿಕೊಳ್ಳದಿದ್ದರೆ ನಿಮಗೆ ರಕ್ಷಣೆಯಾಗಲಾರದು ಎಂಬುದಾಗಿ ಸಹೋದರರಿಗೆ ಉಪದೇಶಮಾಡುತ್ತಿದ್ದರು" (15:1).

ಬಂದವರು ಯಾರೆಂದು ಗಮನಿಸಿರಿ: "ಕೆಲವರು ... ಯೂದಾಯದಿಂದ" - ವಿಶೇಷವಾಗಿ ಯೆರೂಸಲೇಮಿನವರು (ವಚನಗಳು 2-4). ಬಹುಶಃ ವಚನ 5ರಲ್ಲಿ ನಾವು ಗಮನಿಸಿರುವ "ಫರಿಸಾಯ ಮತದವರಲ್ಲಿ ಯೇಸುವನ್ನು ನಂಬಿದ ಕೆಲವರು" ಎಂಬವರೇ ಇರಬಹುದು.[13] ಇದೇ ಮೊದಲ ಸಾರಿ, ಪೌಲನ[14] ಹೊರತು ಪಡಿಸಿ ಇತರೆ ಫರಿಸಾಯ ಕ್ರೈಸ್ತರ ಕುರಿತು ನೋಡುತ್ತೇವೆ. ಅವರು ಕ್ರೈಸ್ತರಾಗಿದ್ದರು ಎಂಬದು ಆಶ್ಚರ್ಯವೆ. ಆದರೆ "ಅವರು ಬಹಳ ಪ್ರಮುಖವಾದ ಪ್ರಶ್ನೆಗೆ ತದ್ವಿರುದ್ಧವಾಗಿದ್ದರಿಂದ" ನಮಗೆ ಆಶ್ಚರ್ಯವಾಗುವದಿಲ್ಲ.[15] ಅವರು ಫರಿಸಾಯ ಹಿನ್ನೆಲೆಯ ಧಾರ್ಮಿಕತೆಯನ್ನು ಹೊಂದಿದ್ದರು ಎಂದು ತಿಳಿದು,[16] ಧರ್ಮ - ಶಾಸ್ತ್ರದ - ನೇಮಗಳನ್ನು ಪಾಲಿಸುವವರ ಗುಂಪಿನ ನಾಯಕರುಗಳಾಗಿದ್ದರು ಎಂದು ಸರಳವಾಗಿ ಅರಿಯಬಹುದು. ಅವರು ಅಂತಿಯೋಕ್ಯಕ್ಕೆ ಬಂದಾಗ ಯೆರೂಸಲೇಮಿನ ಅಧಿಕೃತ ಸಭೆಯ ಪ್ರತಿನಿಧಿಗಳಾಗಿದ್ದರು ಎಂದು ಮೊಲ್ಟೋಟಕ್ಕೆ ಕಂಡರು (ವಚನ 24). ಹೇಗೂ, ಅವರು ಯೆರೂಸಲೇಮಿನವರಾಗಿದ್ದರು (ಜನರು ಕಾರ್ಯನಿರ್ವಹಿಸುತ್ತಿದ್ದ ಮುಖ್ಯ ಕೇಂದ್ರವಾಗಿತ್ತು[17]) ಅದು ಅವರ ಮಾತ್ತಿಗೆ ಒತ್ತು ನೀಡಿತ್ತು.

ತರುವಾಯ, ಅವರ ಬೋಧನೆಯನ್ನು ಗಮನಿಸಿರಿ: "ಮೋಶೆಯ ನೇಮದ ಪ್ರಕಾರ ಸುನ್ನತಿ ಮಾಡಿಸಿಕೊಳ್ಳುದಿದ್ದರೆ, ನಿಮಗೆ ರಕ್ಷಣೆಯಾಗಲಾರದು" ಎಂದು ಬೋಧಿಸಿದರು. ಎರಡು ಸಾವಿರ ವರ್ಷಗಳ ಹಿಂದೆ, ಅಬ್ರಹಾಮನೊಂದಿಗೆ ದೇವರು ಮಾಡಿಕೊಂಡಂತ ಒಡಂಬಡಿಕೆಗೆ, ಸುನ್ನತಿಯು ಕೂಡ ಒಂದು ಭಾಗವಾಗಿತ್ತು (ಆದಿಕಾಂಡ 17:10-14, 23-27). ಹೇಗೂ, ಯೆರೂಸಲೇಮಿನವರು ಸುನ್ನತಿಯನ್ನು ಅಬ್ರಹಾಮನಿಗೆ ಸೇರಿಸಲಿಲ್ಲ ಆದರೆ ಅದನ್ನು ಅಬ್ರಹಾಮನಿಗಿಂತಲೂ ಐನೂರು ವರ್ಷ ಹಿಂದೆ *ಮೋಶೆಗೆ* ದೇವರು ನೀಡಿದ್ದ ಮೋಶೆಯ ಹಕ್ಕುಗಳಿಗೆ ಸಂಬಂಧಿಸಿದಂತೆ ಮಾತನಾಡಿದರು. ಅನ್ಯರು ಸುನ್ನತಿಗೆ ಒಳಗಾಗುವರು ಮಾತ್ರವಲ್ಲದೆ; ಆ ಅನ್ಯರನ್ನು ಯೆಹೂದ್ಯ ಮತಕ್ಕೆ ಪರಿವರ್ತಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ಮತ್ತು ಧರ್ಮಶಾಸ್ತ್ರದ ನೇಮಕ್ಕೆ ಬಳಪಡಿಸುವುದೇ ಅವರ ಗುರಿಯಾಗಿತ್ತು.[18] ವಚನ 5ರಲ್ಲಿ "ಆದರೆ ಫರಿಸಾಯ ಮತದವರಲ್ಲಿ ಯೇಸುವನ್ನು ನಂಬಿದ್ದ ಕೆಲವರು - ಎದ್ದು ದೇವರ ಕಡೆಗೆ ತಿರಿಗಿ ಕೊಂಡಿರುವ ಅನ್ಯ ಜನರಿಗೆ ಸುನ್ನತಿ ಮಾಡಿಸ ಬೇಕು, *ಮತ್ತು* ಮೋಶೆಯ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಕ್ಕೆ ಅವರಿಗೆ ಅಪ್ಪಣೆ ಕೊಡಬೇಕು ಎಂದು ಹೇಳಿದರು [ಅನ್ಯರು]." (ಒತ್ತಿ ಹೇಳಿದ್ದು ನನ್ನದು.)

ಅನ್ಯರು ಧರ್ಮಶಾಸ್ತ್ರವನ್ನು[19] ಧ್ಯಾನ ಮಾಡಿದರೆ ಅವರಿಗೆ *ಒಳಿತಾಗುತ್ತದೆ* ಎಂದು ಈ ಜನರು ಹೇಳದೆ; ಧ್ಯಾನದಿಂದ ಉಂಟಾಗುವ ಒಳಿತಿನ ಕುರಿತು ತರ್ಕಮಾಡದೆ; ಯೆಹೂದ್ಯ ರಾಗುವದಕ್ಕೆ ಅಗತ್ಯವಿರುವ ಮೂಲ ವಿಚಾರವನ್ನು ಹೇಳುತ್ತಿದ್ದರು ಅಂತಿಯೋಕ್ಯದ ಅನ್ಯರಿಗೆ ಅವರು, "ಮೋಶೆಯ ನೇಮಗಳ ಪ್ರಕಾರ ಸುನ್ನತಿ ಮಾಡಿಸಿಕೊಳ್ಳದಿದ್ದರೆ *ಅವರಿಗೆ ರಕ್ಷಣೆಯಿಲ್ಲ*" ಎಂದು ಹೇಳಿದರು.[20] ಸುನ್ನತಿಯು ಆಯ್ಕೆಯಷ್ಟೆ ಎಂದು ಹೇಳಿದರು, ಈ ಕಾರಣದಿಂದ ಅನ್ಯರು ಸುನ್ನತಿ ಮಾಡಿಸಿಕೊಳ್ಳಬಹುದು.[21] ಆದ್ದರಿಂದ ರಕ್ಷಣೆಯು ಸುನ್ನತಿಯಿಂದಲೇ ಎಂದು ದೃಢಪಡಿಸಿದರು!

ಅವರ ಬೋಧನೆಯ ತಾತ್ಪರ್ಯವನ್ನು ಪೌಲ ಬಾರ್ನಬರು ಅರಿತುಕೊಂಡರು: ಅದು ಅವರು ಅನ್ಯರ ನಡುವೆ ಮಾಡಿದ ಸುವಾರ್ತಾ ಸೇವೆಗೆ ನೇರವಾದ ವಿರೋಧವಾಗಿತ್ತು - ಯೆಹೂದ್ಯರಾಗದ ಅಗತ್ಯವಿಲ್ಲದೆ, ಯೇಸುವಿನ ಮೇಲೆ ನಂಬಿಕೆಯಿಟ್ಟು ದೇವರ ಕಡೆಗೆ ತಿರುಗಿಕೊಳ್ಳುವ ವಿಷಯಕ್ಕೆ ಅದು ವಿರೋಧವಾಗಿತ್ತು. ಅವರ ಸಿದ್ಧಾಂತವು ತಪ್ಪಾಗಿತ್ತು ಎಂದು

ಈ ಇಬ್ಬರು ಸೇವಕರುಗಳು ಅರಿತುಕೊಂಡಿದ್ದರು. ಮತ್ತು ಸಿದ್ಧಾಂತದ ಪರಿಣಾಮವನ್ನು ಸಹ ಅರಿತಿದ್ದರು: ಒಂದು ವೇಳೆ ಅವರ ಸಿದ್ಧಾಂತವನ್ನು ಒಪ್ಪಿಕೊಳ್ಳುವದಾದರೆ, ಕ್ರೈಸ್ತತ್ವವು ಕೇಲವೆ ಕೆಲವು "ವೃದ್ಧಿಗೊಂಡು - ಹೊಸದಾದ ಯೂದಾಯದ ಮತವಾಗುತ್ತಿತ್ತು" ಯೆರೂಸಲೇಮಿನಿಂದ ಬಂದವರು ನಂಬಿಕೆಯಿಂದ ಅನ್ಯರಿಗಾಗಿ ತೆರೆದ ಬಾಗಿಲನ್ನು ಮುಚ್ಚಿ ಧರ್ಮಶಾಸ್ತ್ರದ ಬಾಗಿಲನ್ನು ತೆರದು, ಅವರು ಹೇಳಿದ್ದೇನೆಂದರೆ, "ನಾವು ಕ್ರೈಸ್ತರಾಗಬೇಕಿದ್ದರೆ, ನೀವುಗಳು ಈ ಮಾರ್ಗದಲ್ಲಿ ಹಾದು ಮೊದಲು ಯೆಹೂದ್ಯರಾಗಬೇಕು." ಈ ವಿಧವಾದ ಅಂಟುರೋಗವು, ತಾವು ಸ್ಥಾಪಿಸಿದ ಸಕಲ ಸಭೆಗಳಿಗೂ ಹರಡುತ್ತಿತ್ತು ಎಂಬ ವಿಚಾರವನ್ನು ಪೌಲ ಬಾರ್ನಬರು ಅರಿತುಕೊಂಡಿದ್ದರು. ಅದು ತಪ್ಪು ಸಿದ್ಧಾಂತವಾಗಿದ್ದರಿಂದ, ಅದನ್ನು ತಡೆಗಟ್ಟುವ ಅಗತ್ಯತೆ ಇತ್ತು. ಆದ್ದರಿಂದ ಪೌಲ ಬಾರ್ನಬರು, "ಅವರೊಂದಿಗೆ ಬೇಧವನ್ನು ಮತ್ತು ಮಹಾವಿವಾದವನ್ನು ಹೊಂದಿದರು" ಎಂದು ನೋಡುತ್ತೇವೆ (ವಚನ 2ಎ).[22]

ಗಲಾತ್ಯ 2:1-10ರ ಘಟನೆಯು ಇದೇ ಸಿದ್ಧಾಂತವನ್ನು ತಿಳಿಸುವುದಾದರೆ, ಅಂತಿಯೋಕ್ಯದಿಂದ ಬಂದವರ ಕುರಿತು ಪೌಲನು, "ಅವರು ಸಭೆಗೆ ಕಳ್ಳತನದಿಂದ ಸೇರಿಕೊಂಡ ಸುಳ್ಳು ಸಹೋದರರು ಅಲ್ಲಿ[23] ಇದ್ದದರಿಂದ ಬಲಾತ್ಕಾರನಡೆದೀತೆಂಬ ಭಯವಿತ್ತು. ಅವರು ನಮ್ಮನ್ನೂ ದಾಸತ್ವದೊಳಗೆ ಸಿಕ್ಕಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿ ನಮಗೆ ದೊರಕಿರುವ ಸ್ವಾತಂತ್ರ್ಯವನ್ನು ಗೂಢವಾಗಿ ವಿಚಾರಿಸುವದಕ್ಕೆ ಮರೆಸಿಕೊಂಡು ಬಂದವರು" (ಗಲಾತ್ಯ 2:4). "ಸ್ವಾತಂತ್ರ್ಯ" ಹಾಗೂ "ದಾಸತ್ವ" ಎಂಬ ಪದಗಳ ನಡುವಿನ ಹೊಂದಾಣಿಕೆಯನ್ನು ಗಮನಿಸಿರಿ: "ಕ್ರಿಸ್ತ ಯೇಸುವಿನಲ್ಲಿ ದೊರಕಿರುವ ಸ್ವಾತಂತ್ರ್ಯ," "ನಮ್ಮನ್ನು ದಾಸತ್ವಕ್ಕೆ ಸಿಕ್ಕಿಸಬೇಕೆಂದು" ಬಂದವರು. ಪೌಲ ಬಾರ್ನಬರು ಅನ್ಯರಿಗೆ ಸ್ವಾತಂತ್ರ್ಯವನ್ನು ತಂದಿದ್ದರು; ಯೆಹೂದ್ಯ ಮತಾವಲಂಭಿಗಳು (ಮತಾವಲಂಭಿಗಳು) ಅವರನ್ನು ದಾಸತ್ವಕ್ಕೆ ಸಿಕ್ಕಿಸಲು ಯತ್ನಿಸಿದರು.

ಪೌಲನು, ಒಬ್ಬ ಪ್ರೇರಿತನಾದ ಅಪೊಸ್ತಲರನಾಗಿ, ಆ ಸುಳ್ಳು ಪ್ರವಾದಿಗಳನ್ನು ಎದುರಿಸಿದ್ದನು; ಆದ್ದರಿಂದ ಆ ವಿಷಯವು ಅಲ್ಲಿಗೆ ಸಮಾಪ್ತಿಯಾಗಬೇಕಿತ್ತು.[24] ಮೂಲವಾಗಿ ಪೌಲನು, ಹನ್ನೆರಡು ಜನ ಅಪೊಸ್ತರಲ್ಲಿ ಒಬ್ಬನಾಗದೆ ಇದ್ದದ್ದರಿಂದ ಇತರ ಅಪೊಸ್ತಲರಂತೆ ಅವನ ಮಾತುಗಳು ದೃಢವಾದವು ಎಂದು ಕೆಲವು ಕ್ರೈಸ್ತರು ನಂಬಿರಲಿಲ್ಲ.[25] ಪ್ರವಾದಿಗೆ ತನ್ನ ಊರಿನಲ್ಲಿ ಗೌರವವಿಲ್ಲ (ಯೋಹಾನ 4:44) ಎಂಬ ಅನುಭವವನ್ನು ಪೌಲನು ಹೇಗೊ ಅಂತಿಯೋಕ್ಯದಲ್ಲಿ ಅನುಭವಿಸಿದನು. "ಅವರ ಆಲೋಚನೆಗಳು ಏನೇ ಇರಲಿ, ಸಹೋದರರು ಪೌಲ ಬಾರ್ನಬರನ್ನು ತಮ್ಮಲ್ಲಿ ಬೇರೆ ಕೆಲವರನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರ ಮತ್ತು ಸಭೆಯ ಹಿರಿಯರ ಬಳಿಗೆ ಹೋಗಬೇಕೆಂದು ನೇಮಿಸಿದರು" (ಅಪೊಸ್ತಲರ ಕೃತ್ಯಗಳು 15:2ಬಿ). "ಬೇರೆಕೆಲವರು" ಎಂಬ ಪಟ್ಟಿಯಲ್ಲಿ ತೀತನು ಸಹ ಒಳಗೊಂಡಿರಬಹುದು (ಗಲಾತ್ಯ 2:3).[26]

### ಒಂದು ಸಮ್ಮೇಳನ (15:4-21)

ಅವರು ಯೆರೂಸಲೇಮಿಗೆ ಬಂದಾಗ, "ಸಭೆಯವರು, ಅಪೊಸ್ತಲರು ಮತ್ತು ಹಿರಿಯರು ಅವರನ್ನು ಸ್ವೀಕರಿಸಿದರು, ನಂತರ ದೇವರು ತಮ್ಮೊಂದಿಗಿದ್ದು ಮಾಡಿದ ಕಾರ್ಯಗಳನ್ನೆಲ್ಲಾ ಅವರಿಗೆ ತಿಳಿಸಿದರು" (15:4). ಈ ಹಿಂದೆಯೂ ಸಹ, "ಪೌಲ ಬಾರ್ನಬರು ಅಂತಿಯೋಕ್ಯ ಸಭೆಯಲ್ಲಿ ದೇವರು ಮಾಡಿದೆಲ್ಲವನ್ನು ವಿವರಿಸಿದ್ದರು" (14:27). "ಆ ... ಸಮಯದಲ್ಲಿ ದೇವರಿಗೆ ಮಹಿಮೆಯಾಗಿತ್ತು." ಈಗ ಅವರು ಹೇಳಿದ ದೇವರು ಮಾಡಿದ ಕಾರ್ಯಗಳು ಮಹಿಮೆಗಾಗಿ ಆಗಿರದೆ, ಅವರು ಅನ್ಯರ ನಡುವೆ ಮಾಡಿದ ಸೇವೆಯ *ಅಂಗೀಕಾರದ* ಉದ್ದೇಶವಾಗಿತ್ತು.

ಫರಿಸಾಯ ಮತದವರಲ್ಲಿ ಯೇಸುವನ್ನು ನಂಬಿದ್ದ ಕೆಲವರು ಎದ್ದು "ದೇವರ ಕಡೆಗೆ ತಿರುಗಿಕೊಂಡಿರುವ ಅನ್ಯಜನರಿಗೆ ಸುನ್ನತಿ ಮಾಡಿಸಬೇಕು, ಮತ್ತು ಮೋಶೆಯ

ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಕ್ಕೆ ಅವರಿಗೆ ಅಪ್ಪಣೆಕೊಡಬೇಕು'' ಎಂದು ಹೇಳಿದರು (ವಚನ 5). ಗಲಾತ್ಯ 2 ಸಹ ಇದೇ ಕಥೆಯನ್ನು ಹೇಳುವದಾದರೆ, ತೀತನು ಸಹ ಸುನ್ನತಿ ಮಾಡಿಸಿಕೊಳ್ಳಬೇಕೆಂದು ಅವರು ಒತ್ತಾಯ ಮಾಡಿದರು. ಅವನು ಅವರ ಸಂಗಡ ಸಭೆಯಲ್ಲಿ ಕೂಡುವ ಮೊದಲು ಈ ಕಾರ್ಯದ ಅಗತ್ಯತೆ ಇತ್ತು ಎಂದು ತಿಳಿಸಿರಲೂ ಬಹುದು - ಆದರೆ ಪೌಲನು ಅದಕ್ಕೆ ಗಮನ ನೀಡಲಿಲ್ಲ (ಗಲಾತ್ಯ 2:3).

ಈ ವಿಚಾರಗಳು ಸ್ಪಷ್ಟವಾಗಿದ್ದವು; ಅದಕ್ಕೆ ಕ್ರಮವನ್ನು ಸಹ ನಿಗದಿಪಡಿಸಲಾಯಿತು. ಇದರ ವಿಚಾರವಾಗಿ ಜರುಗಿದ ಸಕಲ ಸಭೆಯ ಬಗ್ಗೆ, ನಮ್ಮ ಮುಂದಿನ ಪಾಠಗಳಲ್ಲಿ ಗಮನಿಸಲಾಗುವದು. ಈ ವಿಚಾರದ ಕುರಿತು ನೀಡಲಾದ ಒಂದು ಸಂದೇಶದ ಬಗ್ಗೆ ನಾನು ಗಮನಹರಿಸುತ್ತೇನೆ. ಅಪೊಸ್ತಲರ ಕೃತ್ಯಗಳು 15:6ರಲ್ಲಿ "ಅಪೊಸ್ತಲರೂ, ಸಭೆಯ ಹಿರಿಯರೂ ಈ ವಿಷಯವನ್ನು ಕುರಿತು ಆಲೋಚಿಸುವದಕ್ಕೆ ಕೂಡಿ ಬಂದಿರುವಾಗ," ಇದು ಬಹಿರಂಗ ಸಭೆಯಾಗಿತ್ತು, ಮತ್ತು "ಪೂರ್ಣ ಸಭೆಯು ಅಲ್ಲಿ ಹಾಜರಾಗಿತ್ತು" (ವಚನ 22). ಮತ್ತು "ಅಲ್ಲಿ ಬಹು ವಿವಾದವು ನಡೆದ ಮೇಲೆ" "ಪೇತ್ರನು ಎದ್ದು ನಿಂತನು" (ವಚನ 7ಎ). ಪೇತ್ರನು ಸಹ ಪಾಲಿಸ್ತೇನಿನ ಯೆಹೂದ್ಯನಾಗಿದ್ದರಿಂದ, ಯೆಹೂದ್ಯ ಮತಾವಲಂಭಿಗಳಿಗೆ, ಅವನು ಪ್ರೋತ್ಸಾಹಿಸಬಹುದು ಎಂದು ತಿಳಿದರು. ಅವರು ಪೌಲ ಬಾರ್ನಬರ ಪರವಾಗಿ ಮಾತನಾಡಿದ್ದರಿಂದ, ಅವರೆಲ್ಲರಿಗೆ ಆಶ್ಚರ್ಯವುಂಟಾಯಿತು. ಕೊರ್ನೇಲ್ಯನ ವಿಷಯದಲ್ಲಿ ಉಂಟಾದ ವಿಚಾರವನ್ನೇ ಪೇತ್ರನು ನೀಡಿದನು (ವಚನಗಳು 7-11) (ಅಪೊಸ್ತಲರ ಕೃತ್ಯಗಳು 10; ನೋಡಿರಿ ಸಹ 11:1-18). ರಕ್ಷಣೆಯ ಬಾಗಿಲನ್ನು ಅನ್ಯರಿಗಾಗಿ ತೆರೆಯಲು, ದೇವರು ಪೇತ್ರನನ್ನು ಆಯ್ಕೆ ಮಾಡಿಕೊಂಡಿದ್ದನು ಎಂದು ಪೇತ್ರನು ಸ್ಪಷ್ಟಪಡಿಸಿದನು.[27] ಮತ್ತು ಅನ್ಯರ ರಕ್ಷಣೆಗೆ, ಶಾಸ್ತ್ರವು ತಿಳಿಸಿರುವ ಸುನ್ನತಿಯ ಬಾಗಿಲು ಅನಗತ್ಯ ಎಂದು ಹೇಳಿದನು. ಪೇತ್ರನ ತರ್ಕವು ಬಹು ಬಲವುಳ್ಳದ್ದಾಗಿತ್ತು:

(1) "ದೇವರು ಒದಗಿಸಿರುವ ಪರಿಶುದ್ಧಾತ್ಮನ ಮೂಲಕ, ದೇವರು ಅವರ ಅಂತರಾಳವನ್ನು ಅರಿತುಕೊಂಡು, ಅವರಿಗಾಗಿ ಸಾಕ್ಷಿ ಹೇಳಿದನು ..." (ವಚನ 8).[28] ದೇವರು "ಹೃದಯಗಳನ್ನು ಬಲ್ಲಾತನು" ಎಂದು ಇಲ್ಲಿ ಎರಡನೆಯ ಸಾರಿ ಹೇಳಲಾಗಿದೆ (ನೋಡಿರಿ 1:24). ದೇವರು ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುತ್ತಾನೆ (1 ಸಮುವೇಲ 16:7). ಸುನ್ನತಿ ಹೊಂದದ ಅನ್ಯರಲ್ಲಿದ್ದ ಮೂಡನಂಬಿಕೆಯನ್ನು ಯೆಹೂದ್ಯ ಮತಾವಲಂಭಿಗಳು ತಿಳುಕೊಂಡಿದ್ದರು ಮತ್ತು ಅವರು ದೇವರ ರಾಜ್ಯಕ್ಕೆ ಅನರ್ಹರು ಎಂದು ಪರಿಗಣಿಸಿದ್ದರು, ಆದರೆ ದೇವರು ಅನ್ಯರ *ಹೃದಯಗಳನ್ನು* ನೋಡಿ, ಅವರು ಸಹ ಯೆಹೂದ್ಯರಂತೆ ದೇವರ ರಾಜ್ಯಕ್ಕೆ ಅರ್ಹರು ಎಂದು ಪರಿಗಣಿಸಿದನು (ಅವರಿಗಿಂತಲು ಹೆಚ್ಚು)!

(2) "ದೇವರು ಯೆಹೂದ್ಯರ ಮತ್ತು ಅನ್ಯರ ನಡುವೆ ತಾರತಮ್ಯವನ್ನು ತೋರಲಿಲ್ಲ"[29] "ಅವರ ಹೃದಯಗಳನ್ನು ನಂಬಿಕೆಯಿಂದ ತೊಳೆದಿದ್ದನು" (15:9) - ಕ್ರೈಸ್ತರು ತೊಳೆಯಲ್ಪಟ್ಟಂತೆ ಯೆಹೂದ್ಯರು ಸಹ ತೊಳೆಯಲ್ಪಟ್ಟಿದ್ದರು. ಅವರ ಹೃದಯಗಳು "ನಂಬಿಕೆಯಿಂದ" ಶುದ್ಧವಾಯಿತೇ ವಿನಃ ಸುನ್ನತಿಯಿಂದಾಗಲಿ ಅಥವಾ ನೇಮಗಳನ್ನು ಪಾಲಿಸುವದರಿಂದಾಗಲೀ ಆಗಲಿಲ್ಲ. ಪೇತ್ರನು ಕೊರ್ನೇಲ್ಯನಿಗೆ ತಿಳಿಸಿದಂತೆ "... ದೇವರು ಪಕ್ಷಪಾತಿಯಲ್ಲ" (10:34); ದೇವರು "ವ್ಯತ್ಯಾಸವನ್ನು" ತೋರಿಸುವದಿಲ್ಲ ಎಂದು ಆ ಗುಂಪಿಗೆ ಹೇಳಿದನು. ಪಂಚಾಶತ್ತಮ ದಿನದಂದು, ಯೆಹೂದ್ಯರು ಸಹ ನಂಬಿ ದೀಕ್ಷಾಸ್ನಾನ ಮಾಡಿಕೊಂಡಂತೆ (2:37, 38), ಕೊರ್ನೇಲ್ಯನು ಮತ್ತು ಅವನ ಮನೆಯವರು ಸಹ ದೀಕ್ಷಾಸ್ನಾನ ಮಾಡಿಕೊಂಡರು (10:43, 48).

(3) ಈ ಯೊಹೂದ್ಯ ಮತಾವಲಂಭಿಗಳು ಅನ್ಯರ ಮೇಲೆ ಸುನ್ನತಿ ಎಂಬದನ್ನು ಹೊರಿಸಿದರು, ಇದರಿಂದ ಅವರು ದೇವರನ್ನು "ಪರೀಕ್ಷಿಸುತ್ತಿದ್ದರು" (ವಚನ 10ಎ). ಧರ್ಮಶಾಸ್ತ್ರವನ್ನು ಹೊರಿಸುವವರು, ಪೌಲ ಬಾರ್ನಬರಿಗೆ ಸವಾಲನ್ನು ಹಾಕುತ್ತಿದ್ದರು

ಎಂದು ಭಾವಿಸಿದ್ದರು, ಆದರೆ ಅವರು ದೇವರ ತೀರ್ಪನ್ನು ಪ್ರಶ್ನಿಸಿ, ಆತನ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದರು![30]

(4) ಅ ಧರ್ಮ ಶಾಸ್ತ್ರವನ್ನು ಅನ್ಯರ ಮೇಲೆ ಹೊರಿಸುವ ಮೂಲಕ, ಅವರು "ಶಿಷ್ಯರ ಹೆಗಲಿನ ಮೇಲೆ ನೊಗವನ್ನು ಹೊರಿಸಿದ್ದರು"[31] (ವಚನ 10ಬಿ) ಅದನ್ನು ಯೆಹೂದ್ಯರು ಸಹ ಹೊರಲು ಅಸಾಧ್ಯವಾಗಿತ್ತು. ನೇಮಗಳನ್ನು ಪ್ರೀತಿಸುವ ಪ್ರತಿ ಯೆಹೂದ್ಯನು ಇದನ್ನು ಯಾಥಾರ್ಥವಾಗಿ ಒಪ್ಪಿಕೊಳ್ಳಬೇಕಿತ್ತು (ಕೀರ್ತನೆ 119:97). ಯಾಕೆಂದರೆ ಅವನು ಅದನ್ನು ಪಾಲಿಸುವಲ್ಲಿ ಯಾವಾಗಲೂ ಸೋತು ಹೋಗುತ್ತಿದ್ದನು.[32] ಅದರ ಭಾರದ ದೆಸೆಯಿಂದ ಅವನು ಸೋಲುವವರೆಗೆ ದಿನೇ ದಿನೇ ತನ್ನ ಮನಸ್ಸಿನಲ್ಲಿ ಪಾಪ ಪ್ರಜ್ಞೆಯನ್ನು ಹೊಂದಿದ್ದನು. ಆದ್ದರಿಂದ ಪೇತ್ರನು, "ಹೊರಲಾರದ ನೊಗವನ್ನು ಏಕೆ ಹೊರಿಸುವಿರಿ ಎಂದು ಹೇಳಿದನು?"

(5) ಪೇತ್ರನ ಅಂತಿಮ ಮಾತುಗಳು ಬಹು ಬಲವುಳ್ಳದ್ದಾಗಿತ್ತು; ಕರ್ತನಾದ ಯೇಸುವಿನ ಕೃಪೆಯಿಂದಲೇ ನಾವು ರಕ್ಷಣೆ ಹೊಂದುವೆವೆಂಬದಾಗಿ ನಂಬುತ್ತೇವಲ್ಲಾ; ಹಾಗೆಯೇ ಅವರೂ ಹೊಂದುವರು ಎಂದು ಹೇಳಿದನು (ವಚನ 11). "ಕರ್ತನಾದ ಯೇಸುವಿನ ಕೃಪೆಯಿಂದಲೇ ನಾವು ರಕ್ಷಣೆ ಹೊಂದುವೆವು" ಎಂಬ ಮಾತಿಗೆ ಹೆಚ್ಚು ಗಮನ ನೀಡಿರಿ. *ಕೃಪೆಯಿಂದಲೇ* ರಕ್ಷಿಸಲ್ಪಟ್ಟಿದ್ದೇವೆ - ಯೋಗ್ಯರಲ್ಲದವರಿಗೆ, ದೇವರ ದಯೆ - ಈ ಮಾರ್ಗದಿಂದ ಮಾತ್ರ ರಕ್ಷಣೆ! ಯೆಹೂದ್ಯರು ಮೋಶೆಯ ಧರ್ಮಶಾಸ್ತ್ರವನ್ನು ಪೂರ್ಣವಾಗಿ ನೆರವೇರಿಸಲು ಸಾಧ್ಯವಾಗಲಿಲ್ಲ; ನಾವುಗಳೂ ಸಹ ಅವುಗಳನ್ನು ನೆರವೇರಿಸಲು ಅಸಾಧ್ಯ (ರೋಮಾಪುರ 3:23). ಕೃಪೆಯಿಂದ ರಕ್ಷಿಸಲ್ಪಡದಿದ್ದರೆ, ನಮಗೆ ರಕ್ಷಣೆಯೇ ಇರುವದಿಲ್ಲ. ಯೆಹೂದ್ಯರು ಮತ್ತು ಅನ್ಯರೂ ಈ ಎರಡು ಗುಂಪುಗಳು ಸಹ ಕೃಪೆಯಿಂದಲೇ ರಕ್ಷಿಸಲ್ಪಟ್ಟವರು ಎಂಬ ಪೇತ್ರನ ಮಾತನ್ನು ಗಮನಿಸಿರಿ. "ನಮ್ಮ ಹಾಗೆ ನಾವು ಬಯಸಿದ್ದೆವು." ಆದರೆ ಅವನು "*ನಾವೂ* ಸಹ ಯೇಸುವಿನ ಕೃಪೆಯಿಂದ ರಕ್ಷಿಸಲ್ಪಟ್ಟಂತೆ, ಅದೇ ವಿಧದಲ್ಲಿ ಅವರಿಗೆ ರಕ್ಷಣೆಯಾಯಿತು" ಎಂದು ಹೇಳಿದನು. ಇನ್ನೊಂದು ಪದದಲ್ಲಿ "ಅನ್ಯರೂ ಸಹ ಕೃಪೆಯಿಂದ ರಕ್ಷಿಸಲ್ಪಡಬೇಕು ಎಂದು ದೇವರು ನಿಯಮವನ್ನು ಮಾಡಿರುವನೇ, ವಿನಃ ಧರ್ಮಶಾಸ್ತ್ರದಿಂದಲ್ಲ; ಯೆಹೂದ್ಯರಾದ ನಮಗೆ ರಕ್ಷಣೆಯ ಅಗತ್ಯತೆಯಿದ್ದರೆ, ಕೃಪೆಯಿಂದಲೇ ಹೊರತು ನೇಮಗಳಿಂದಲ್ಲ!"

ಪೇತ್ರನು ಮಾತನಾಡಿದ ನಂತರ, ದೇವರು ಅವರನ್ನು ಆಶೀರ್ವದಿಸಿದ ಕುರಿತು ಪೌಲ ಬಾರ್ನಬರು ವರದಿಯನ್ನು ನೀಡಿದರು. ಅಂತಿಮವಾಗಿ ಯಾಕೋಬನು ಮಾತನಾಡಿ - ಅವನು ಯೇಸುವಿನ ಸಹೋದರನಾಗಿದ್ದು;[33] ಯೆರೂಸಲೇಮಿನ ಸಭೆಯಲ್ಲಿ ಸಭಾಸ್ತಂಭವಾಗಿದ್ದನು (ಗಲಾತ್ಯ 2:9). ಈಗ ಯಾಕೋಬನು ಅವರಿಗೆ ಈ ವಿಷಯದಲ್ಲಿ ಪ್ರೋತ್ಸಾಹ ನೀಡಬಹುದು ಎಂದು ಯಾಕೋಬನು ಸಹ, ಅನ್ಯರ ರಕ್ಷಣೆಯು ದೇವರ ಉದ್ದೇಶ ಮತ್ತು ಯೋಜನೆಯಾಗಿದೆ ಎಂದು ವಾಕ್ಯಗಳ ಮೂಲಕ ತಿಳಿಸಿದನು.[34] ಮತ್ತು ಅನ್ಯರು ಮೊದಲ ಯೆಹೂದ್ಯರಾಗಬೇಕು ಎಂದು ದೇವರು ಯಾವುದೇ ವಿಧವಾದ ಪ್ರವಾದನೆಯನ್ನು ಹೇಳಿರುವದಿಲ್ಲ.[35] ನಂತರ ಯಾಕೋಬನು ಮಾತನಾಡಿ, "ಹೀಗಿರಲಾಗಿ, ನನ್ನ ಅಭಿಪ್ರಾಯವೇನೆಂದರೆ - ಅನ್ಯಜನರಲ್ಲಿ ದೇವರ ಕಡೆಗೆ ತಿರುಗಿ ಕೊಳ್ಳುವವರನ್ನು ತೊಂದರೆಪಡಿಸಬಾರದು" ಎಂದು ಹೇಳಿದನು (15:19). ಇನ್ನೊಂದು ವಾಕ್ಯದಲ್ಲಿ: "ಅನ್ಯ ಕ್ರೈಸ್ತರ ಮೇಲೆ ಸುನ್ನತಿಯನ್ನು ಮತ್ತು ನೇಮವನ್ನು ಹೇರಿ ಅವರನ್ನು ನಾವುಗಳು ತೊಂದರೆ ಪಡಿಸಬಾರದು" ಎಂಬದೇ!

## ಒಂದು ಸಾಂತ್ವನ (15:22-31)

"ಆಗ ಅಪೊಸ್ತಲರು ಮತ್ತು ಸಭೆಯ ಹಿರಿಯರು ಯಾಕೋಬನ ಶಿಫಾರಸನ್ನು ಸಮ್ಮತಿಸಿದರು" (ವಚನ 22), ಮತ್ತು ಅಂತಿಯೋಕ್ಯ ಸಭೆಗೆ ಪತ್ರವನ್ನು ಕಳುಹಿಸಿದರು.[36] ಆ ಪತ್ರದ ಒಕ್ಕಣೆ ಏನೆಂದರೆ, ಆದಾಗಿ ನಮ್ಮೊಳಗಿಂದ ಹೋದ ಕೆಲವರು ನಮ್ಮಿಂದ ಏನೂ ಅಪ್ಪಣೆ ಹೊಂದದೆ ಹೋಗಿರುವದರಿಂದ, ಅವರು ನಮ್ಮ ಪ್ರತಿನಿದಿಗಳಲ್ಲ (ವಚನ 24).

ಹಾಗೂ ಅನ್ಯರು ಸುನ್ನತಿ ಮಾಡಿಸಿಕೊಂಡು, ನೇಮಗಳನ್ನು ಪಾಲಿಸುವ ಅಗತ್ಯತೆಯಿಲ್ಲ (ವಚನಗಳು 28, 29).[37] ಅಂತಿಯೋಕ್ಯ ಸಭೆಯಲ್ಲಿ ಆ ಪತ್ರವನ್ನು ಓದಲಾಗಿ, ಅದಲಿಂದ, "ಧೈರ್ಯ ತಂದುಕೊಂಡು ಸಂತೋಷಪಟ್ಟರು" (ವಚನ 31). ಬಾಗಿಲು ಮುಚ್ಚಲು ಪ್ರಯತ್ನಪಟ್ಟ ಯೆಹೂದ್ಯರು ಸೋತುಹೋದರು; ದೇವರ ನಂಬಿಕೆಯ ಬಾಗಿಲು ಅನ್ಯರಿಗಾಗಿ ತೆರೆದುಕೊಂಡಿತು!


## ಈ ದಿನಗಳಲ್ಲಿರುವ – ಬಾಗಿಲು ಮುಚ್ಚುವವರು

ಯೆರೂಸಲೇಮಿನ ಸಭೆಯು, ಆ ಸಮಸ್ಯೆಯನ್ನು ಒಂದೇ ಬಾರಿಗೆ ಪರಿಹರಿಸಲಿಲ್ಲ. ಯಾಕಂದರೆ, ಆ ಬಾಗಿಲು ಮುಚ್ಚುವವರು (ಅವರ ಸಂಬಂಧಿಕರು) ಜಗತ್ತಿನ ಉದ್ದಗಲಕ್ಕೂ ಪ್ರಯಾಣ ಮಾಡಿ, ಅನ್ಯರೆಲ್ಲರೂ ಸುನ್ನತಿ ಮಾಡಿಸಿಕೊಂಡು, ನೇಮ ಗಳನ್ನು ಪಾಲಿಸ ಬೇಕೆಂದು ಪ್ರಚಾರ ಮಾಡುತ್ತಿದ್ದರು. ಪೌಲನ ಹಳೆಯ ಪತ್ರಿಕೆಗಳಾದ - ಗಲಾತ್ಯ ಮತ್ತು ರೋಮಾಪುರ ಪತ್ರಿಕೆಗಳಲ್ಲಿ, ಈ ಸಮಸ್ಯೆಯ ಕುರಿತು ವಿಸ್ತಾರ ವಾಗಿ ಚರ್ಚೆಮಾಡಲಾಗಿದೆ. ಆದರೆ ಈ ವಿಧವಾದ ಬಾಗಿಲು ಮುಚ್ಚುವವರ ಹಿಂಬಾಲಕರುಗಳು ಹೆಚ್ಚಾಗಿ ಈ ದಿನದವರೆಗೂ ಮುಂದುವರಿಯುತ್ತಿದ್ದಾರೆ.

### ನೇಮಗಳನ್ನು ಪಾಲಿಸುವ – ಬಾಗಿಲು ಮುಚ್ಚುವವರು

ಉದಾಹರಣೆಗೆ, ಆ ದಿನಗಳಲ್ಲಿ ಹಳೇ ಒಡಂಬಡಿಕೆಯ ನೇಮಗಳನ್ನು ಪಾಲಿಸಬೇ ಕೆಂದು ಹೇಳುತ್ತಿದ್ದ ಕ್ರೈಸ್ತರಂತೆ, ಈ ದಿನದಲ್ಲಿಯೂ ಇರುವರು. ಒಂದು ಧರ್ಮದ ಗುಂಪು, ತನ್ನ ಪರಿಶುದ್ಧ ಸ್ಥಳದ ಹಿನ್ನೆಲೆಯನ್ನು ಹಳೇ ಒಡಂಬಡಿಕೆ ಕಂಡುಕೊಂಡು, ಅವರದೇ ಆದ ಯಾಜಕತ್ವ ಧೂಪ ಸುಡುವಂಥದ್ದು ಮತ್ತು ಮೇಣದ ಬತ್ತಿಗಳನ್ನು ಹಚ್ಚುವ ಕಾರ್ಯಗಳನ್ನು ಹೊಂದಿರುವರು. ಇನ್ನೊಂದು ಗುಂಪಿನ ಜನರು ವಿಮೋಚನಕಾಂಡ 20ನೇ ಅಧ್ಯಾಯವನ್ನು ಬೋಧಿಸಿ, ಕ್ರೈಸ್ತರು ಏಳನೇ ದಿವನ್ನು ವಿಶೇಷವಾದದ್ದೆಂದು ತಿಳಿದು, ಆ ದಿನವೇ ಆರಾಧಿಸ ಬೇಕು ಎಂದು ಹೇಳುವರು. ವಾರದ ಮೊದಲನೆಯ ದಿನವನ್ನು ಪರಿಗಣಿಸಿಬಾರದು ಎಂದು ಸಹ ಹೇಳುವರು. ಅನೇಕ ಧಾರ್ಮಿಕ ಸಂಘಟನೆಗಳು ಸಂಪ್ರದಾಯಕ ಆರಾಧನೆಯನ್ನು ಮಾಡಿ, ಅದರಲ್ಲಿ ವಾದ್ಯಗಳನ್ನು ಹಾಗೂ ಸಂಗೀತ ಸಮೂಹವನ್ನು ಬಳಸುತ್ತಾರೆ, ಮತ್ತು ಹಳೇ ಒಡಂಬಡಿಕೆಯ ಕ್ರಮಗಳನ್ನು ಆಚರಿಸುತ್ತಾರೆ. ಕೆಲವರು ಅನೇಕ ಹೆಂಡತಿಯರನ್ನು ಹೊಂದಬಹುದೆಂಬ ಹಳೇ ಒಡಂಬಡಿಕೆಯ ನಿಯಮಗಳನ್ನು ಹೇಳುತ್ತಾರೆ.

ಅಪೊಸ್ತಲರ ಕೃತ್ಯಗಳು 15ರ ಯೆಹೂದ್ಯ ಮತಾವಲಂಬಿಗಳು ಹಾಗೂ ನೇಮಗಳನ್ನು ಪಾಲಿಸಬೇಕು ಎಂದು ಹೇಳುವ ಈಗಿನ ಕಾಲದ ಜನರು - ಇಂಥಾ ಒಂದು ಮೂಲ ತಪ್ಪನ್ನು ಮಾಡಿದರು. ಹಳೆಯ ನಿಯಮಗಳನ್ನು ಶಿಲುಬೆಗೆ ಹಾಕಿರುವ ಚಿತ್ರಪಟವನ್ನು ನಾವುಗಳು ಚಿಕ್ಕವರಿರುವಾಗ ನೋಡಿರುವೆವು (ಕೊಲೊಸ್ಸೆ 2:14, 16). ಆತನು ಮರಣವನ್ನು ಅನುಭವಿಸಿದಾಗ, ಹೊಸ ಒಡಂಬಡಿಕೆಯು ಕಾರ್ಯರೂಪಕ್ಕೆ ಬಂತು (ಇಬ್ರಿಯ 9:16, 17). ಯಾವ ರೀತಿಯಲ್ಲಿ ಇದನ್ನು ಅರ್ಥಮಾಡಿಕೊಳ್ಳಬಹುದು?



ಅಪೊಸ್ತಲರ ಕೃತ್ಯಗಳು 15ರ ಯೂದಾಯದವರ ಕುರಿತಾಗಿ ತಿಳಿಯುವ ಮೊದಲು, ಗಲಾತ್ಯ ಮತ್ತು ರೋಮಾಪುರ ಪತ್ರಿಕೆಯು ಇನ್ನೂ ಲಿಖಿತರೂಪದಲ್ಲಿರಲಿಲ್ಲ - ಕ್ರೈಸ್ತರಾದ ಯೆಹೂದ್ಯರು ನೇಮಗಳ ಸ್ಥಾನದ ಕುರಿತು ಬದಲಾವಣೆಯಾಗುವ ಕಾಲದಲ್ಲಿದ್ದರು. ಇನ್ನೊಂದೆಡೆ, ಈ ದಿನಗಳಲ್ಲಿರುವ ನೇಮಗಳನ್ನು ಪಾಲಿಸಬೇಕು ಎಂಬವರೆಲ್ಲರೂ, ಪೌಲನು ಬರೆದಿರುವ ಗಲಾತ್ಯ ಪತ್ರಿಕೆಯನ್ನು ಓದಲೇಬೇಕು. ಪೌಲನು ಗಲಾತ್ಯ ಪತ್ರಿಕೆಯಲ್ಲಿ, ಪೌಲನು ಬರೆದ ಧರ್ಮಶಾಸ್ತ್ರವು ತನ್ನ ಕಾರ್ಯವನ್ನು ನೇರವೇರಿಸಿ, ಈಗ ಯಾವುದೇ ಅಧಿಕಾರವನ್ನು ಹೊಂದಿರುವದಿಲ್ಲ (ಗಲಾತ್ಯ 3:16, 19, 24, 25). ರೋಮಾಪುರ ಪತ್ರಿಕೆಯಲ್ಲಿ, ಪೌಲನು "ಯಾವನಾದರೂ ನೇಮ ನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ" (ರೋಮಾಪುರ 3:20; ಒತ್ತಿ ಹೇಳಿದ್ದು ನನ್ನದು), ಎಫೆಸದವರಿಗೆ ಬರೆಯುವಾಗ, "*ಕೃಪೆಯಿಂದಲೇ* ರಕ್ಷಣೆ" ಎಂಬದಾಗಿದೆ (ಎಫೆಸ 2:8; KJV; ಒತ್ತಿ ಹೇಳಿದ್ದು ನನ್ನದು).

**ಸಂಪ್ರದಾಯವನ್ನು ಹೇರುವ - ಬಾಗಿಲು - ಮುಚ್ಚುವವರು**

ಮೋಶೆಯ ನೇಮಗಳನ್ನು ಹೊರಿಸುವವರು ಮಾತ್ರ ಆತ್ಮೀಕ ಸ್ವಾತಂತ್ರಕ್ಕೆ ಅಡ್ಡಿ ಉಂಟು ಮಾಡುವವರಲ್ಲ. ಅಪೊಸ್ತಲರ ಕೃತ್ಯಗಳು 15ರಲ್ಲಿರುವ ಫರಿಸಾಯರುಗಳು ಗ್ರಂಥಗಳಿಗೆ ಸಮಾನವಾದ ತಮ್ಮದೇ ಆದ ನಿಯಮಾವಳಿಗಳನ್ನು ಮಾಡಿಕೊಳ್ಳುತ್ತಿದ್ದರು. ಯೇಸು ಫರಿಸಾಯರ ಕುರಿತು, "ಅವರು ಭಾರವಾದ ಹೊರೆಗಳನ್ನು ಕಟ್ಟಿ ಜನರ ಹೆಗಲಿನ ಮೇಲೆ ಹೊರಿಸುತ್ತಾರೆ ..." ಎಂದು ಹೇಳಿರುವನು (ಮತ್ತಾಯ 23:4).

ಸಂಪ್ರದಾಯಗಳಲ್ಲಿ ಯಾವುದೇ ದೋಷವು ಇರುವದಿಲ್ಲ, ನಮ್ಮೆಲ್ಲರಿಗೆ ನಿಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಸಂಪ್ರದಾಯಗಳಿರುತ್ತವೆ. ಆರಾಧನೆಗೆ ಅಡ್ಡಿಮಾಡಲಾರದ ಸಂಪ್ರದಾಯಗಳನ್ನು ಸಭೆಗಳಲ್ಲಿ ಆಚರಿಸಬಹುದು. ಆದರೆ ನಮ್ಮ ಸಂಪ್ರದಾಯಗಳನ್ನು ಗ್ರಂಥಗಳಿಗೆ ಸಮಾನಮಾಡಿ, ಅವುಗಳನ್ನು ಆಚರಿಸಬೇಕು ಎಂಬದು ಯೇಸುವಿನಿಂದ ಖಂಡನೆಗೆ ಒಳಗಾಗಿದೆ, ಮತ್ತಾಯ 15:9: "ಮನುಷ್ಯನು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ."[38]

ಈ ದಿವಸಗಳಲ್ಲಿರುವ ಧಾರ್ಮಿಕ ಸಂಘಟನೆಗಳು ಅನೇಕ ವಿಧವಾದ ಕಟ್ಟುಪಾಡುಗಳನ್ನು ಹೊಂದಿರುತ್ತವೆ, ಅವುಗಳು ಸಮಾಜದ ಒಂದು ಭಾಗವಾಗಿದೆ. ಕೆಲವರಿಗೆ ಅದು ಅತಿಪ್ರಾಮುಖ್ಯವಾಗಿದೆ. ಅದನ್ನು ಹೇಳುವ ಮತ್ತು ಮಾಡುವ ವಿಷಯದಲ್ಲಿ ಕೆಲವರು ಸುರಕ್ಷೆ ಹೊಂದಿರುವರೆಂದು ಭಾವಿಸಿರುತ್ತಾರೆ, "ಇದರ ಕುರಿತು ಒಂದು ಹೇಳಿಕೆಯಿದೆ; ದಾಸತ್ವದಲ್ಲಿ ಸುರಕ್ಷೆಯಿದೆ"[39] ನಮ್ಮಲ್ಲಿ ಯಾರೂ ಸಹ ಕ್ರಿಸ್ತನಲ್ಲಿ ಹೊಂದಿರುವಂಥ ನಮ್ಮ ಸ್ವಾತಂತ್ರವನ್ನು ಮನುಷ್ಯ ನಿರ್ಮಿತ ಸಂಪ್ರದಾಯಗಳಿಗೆ ಸಮರ್ಪಣೆ ಮಾಡದಿರಲಿ ಎಂಬದೇ ನನ್ನ ಪ್ರಾರ್ಥನೆಯಾಗಿದೆ ಪೌಲನು ಬರೆದು, "ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದರು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳ ಬೇಡಿರಿ" (ಗಲಾತ್ಯ 5:1)

ಸುವಾರ್ತೆಗಾಗಿ ಹೊಸದಾಗಿ ತೆರೆಯಲ್ಪಡುತ್ತಿರುವ ಸ್ಥಳಗಳವರಿಗಾಗಿ, ಒಂದು ಎಚ್ಚರಿಕೆಯ ಮಾತನ್ನು ನೀಡುವದು ಅಗತ್ಯವಿದೆ (ನೋಡಿರಿ 20:28-31). ದೇವ ಸೇವ ೀಯಲ್ಲಿನ ನಾನು ಕಲಿತಿರುವ ಅನುಭವದ ಪಾಠವೇನೆಂದರೆ, ಒಂದು ನೂತನ ಸ್ಥಳದಲ್ಲಿ ಕರ್ತನ ಸಭೆಯು ಸ್ಥಾಪನೆಗೊಂಡು, ಅದು ಕಂಗೊಳಿಸುವಾಗ, ಕೆಲವರು ಅಲ್ಲಿಗೆ ಬಂದು "ಅಲ್ಲಿರುವ ಜನರು ಕ್ರಿಸ್ತನಿಂದ ಹೊಂದಿರುವ ಸ್ವಾತಂತ್ರದ ಕುರಿತು ಗೂಡಚರ್ಯೆಯನ್ನು ನಡಿಸಿ, ಅವರನ್ನು (ಹೊಸ ಕ್ರೈಸ್ತರನ್ನು) ದಾಸತ್ವಕ್ಕೆ ನಡೆಸುತ್ತಾರೆ" (ಗಲಾತ್ಯ 2:4). ಅಪೊಸ್ತಲರ ಕೃತ್ಯಗಳು 15ರಲ್ಲಿ ಯೂದಾಯರು ಯೆರೂಸಲೇಮಿನಿಂದ ಬಂದದ್ದರಿಂದ,

ಗೌರವಕ್ಕೆ ಪಾತ್ರರಾದರು. ಈ ದಿವಸಗಳಲ್ಲಿಯೂ ಸಹ ಅಮೇರಿಕದಿಂದ ಬರುವ ಯಾವುದೇ ಪ್ರಸಂಗಿಯು ಸ್ವಸ್ಥಬೋಧನೆಯನ್ನೂ ಹೊಂದಿರುವರು ಎಂದು ಜನರು ತಿಳಿಯುತ್ತಾರೆ (2 ತಿಮೊಥೆ 4:3), ಆದರೆ, ಅದು ಯಾವಾಗಲೂ ಸತ್ಯವಾಗಿರುವದಿಲ್ಲ. ದೇವರ ಮೂಲವನ್ನು ಹೊರತುಪಡಿಸಿ, ತಮ್ಮದೇ ಮೂಲದಿಂದ ಉದ್ಭವಿಸಿದ ಕಟ್ಟುಪಾಡುಗಳ ಬಾರವನ್ನು ಸಭೆಯವರ ಮೇಲೆ ಹಾಕುವಂಥ ಮನುಷ್ಯರ ಬಗ್ಗೆ ಎಚ್ಚರವುಳ್ಳವರಾಗಿರ್ರಿ.[40] ನಮ್ಮ ಸ್ವಾತಂತ್ರದ ನಿರ್ಣಯವನ್ನು ನಾವೇ ಮಾಡಬಹುದೆಂಬ ಅನುಭವವನ್ನು ನಮ್ಮ ಕ್ರೈಸ್ತ ಅನುಭವದಲ್ಲಿ ತಿಳಿದಿದ್ದೇವೆ.[41] ಆದರೆ ಈ ರೀತಿ ಮಾಡುವಾಗ ವಾಕ್ಯದ ಮೂಲ ಉಪದೇಶಗಳಿಗೆ ಯಾವುದೇ ವಿಧವಾದ ಧಕ್ಕೆಯುಂಟಾಗಬಾರದು ನಿಮ್ಮ ಸ್ವಾತಂತ್ರದ ಬಾಗಿಲನ್ನು ಯಾರೂ ಸಹ ಮುಚ್ಚದಂತೆ ನೋಡಿಕೊಳ್ಳಿರಿ!

**ಕಾರ್ಯ ಪ್ರವೃತ್ತಿಯನ್ನು ಹೊಂದಿರುವ - ಬಾಗಿಲು ಮುಚ್ಚುವವರು**

ಇನ್ನೊಂದು ವಿಧವಾದ ಬಾಗಿಲು ಮುಚ್ಚುವರ ಕುರಿತು ಹೇಳದೆ ನಾವು ಮುಂದಕ್ಕೆ ಸಾಗಲಾರೆವು: ಕ್ರಿಯೆಯಿಂದ - ರಕ್ಷಣೆ ಎಂಬ ಬಾಗಿಲು ಮುಚ್ಚುವವರು: ಸಕಲ ಬಾಗಿಲು ಮುಚ್ಚುವವರಿಗಿಂತಲೂ ಇವರು ಹೆಚ್ಚು ಅಪಾಯಕಾರಿಯಾಗಿರುವರು; ಈಗಾಗಲೇ ತಿಳಿಸಿರುವವರ ಹಾಗೆ, (1) ನಾವು ಹಳೇ ಒಡಂಬಡಿಕೆಯನ್ನು ಹೊರತು ಪಡಿಸಿ, ಹೊಸ ಒಡಂಬಡಿಕೆಗೆ ಮಾತ್ರ ಒಳಗಾದವರು ಎಂದು ಒತ್ತಿ ಹೇಳುವವರು; (2) ಮನುಷ್ಯರ ಸಂಪ್ರದಾಯಗಳನ್ನು ಅವರು ಮುರಿಯುವರು; (3) ಹೊಸ ಒಡಂಬಡಿಕೆಯಲ್ಲಿರುವ ಅಪ್ಪಣೆಗಳನ್ನೆ ಬೋಧಿಸುವರು ಅದಕ್ಕೆ ಏನನ್ನು ಸೇರಿಸಿರುವದಿಲ್ಲ. ಇದೆಲ್ಲವನ್ನು ನಾವು ಮೆಚ್ಚುತ್ತೇವೆ - ಹಾಗಾದರೆ ಅಪಾಯವೆಲ್ಲಿದೆ? ಅವರು ದೇವರ ಕೃಪೆಯನ್ನು ಹೊರತುಪಡಿಸಿ, ಮನುಷ್ಯರ ಕಟ್ಟಳೆಗಳನ್ನೆ ಪಾಲಿಸಬೇಕು ಎಂದು ಹೇಳುವದೇ, ಅಪಾಯಕರವಾಗಿದೆ. ಹಳೇ ಒಡಂಬಡಿಕೆಯ ಅಪ್ಪಣೆಗಳ ಪ್ರತಿಯಾಗಿ, ಹೊಸ ಒಡಂಬಡಿಕೆ ಅಪ್ಪಣೆಗಳನ್ನೇ ಹೇಳಿ, ಈ ಅಪ್ಪಣೆಗಳನ್ನು ಪೂರ್ಣವಾಗಿ ಪಾಲಿಸುವದರಿಂದಲೇ ರಕ್ಷಣೆಯಾಗುತ್ತೆದೆ ಎಂದು ಹೇಳುವನು.

ಅನೇಕ ಕಾರಣಗಳಿಂದ ಇದು ತಪ್ಪಾಗಿರುತ್ತದೆ. ಸತ್ಯವೇದವು ಇದನ್ನು ಬೋಧಿಸದೆ ಇರುವದರಿಂದ ಇದು ತಪ್ಪಾಗಿರುತ್ತದೆ. ಅಪೊಸ್ತಲರ ಕೃತ್ಯಗಳು 15ರ ಪೇತ್ರನ ಪ್ರಸಂಗದಲ್ಲಿ, "ಕರ್ತನಾದ ಯೇಸುವಿನ ಕೃಪೆಯಿಂದಲೇ ನಾವು ರಕ್ಷಿಸಲ್ಪಟ್ಟೆವು" ಎಂದು ಒತ್ತಿ ಹೇಳಿ ರುವನು (ವಚನ 11). ಅದರಿಂದ, ಮೋಶೆಯ ನೇಮಗಳಿಂದ ಅನ್ಯರು ರಕ್ಷಿಸಲ್ಪಡುವದಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ, ಸಾಮಾನ್ಯವಾದ ನೇಮಗಳನ್ನು ಪಾಲಿಸುವದರಿಂದಲೂ ರಕ್ಷಣೆಯಾಗುವದಿಲ್ಲವೆಂದು ಸಹ ರುಜುವಾತು ಮಾಡಿರುತ್ತಾರೆ. ಎಫೆಸ 2:8, 9ರಲ್ಲಿ ಪೌಲನು ಈ ಸತ್ಯವನ್ನು ಒತ್ತಿ ಹೇಳಿ: "ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ, ಆ ರಕ್ಷಣೆಯು ನಿಮಿಂದುಂಟಾದದ್ದಲ್ಲಾ ಆದದರಿಂದ ಹೊಗಳಿಕೊಳ್ಳವದಕ್ಕೆ ಯಾರಿಗೂ ಆಸ್ಪದವಿಲ್ಲ." ದೇವರಿಗೆ ವಿಧೇಯರಾಗಬಾರದೆಂಬ ತಾತ್ಪರ್ಯವಲ್ಲ (ಮತ್ತಾಯ 7:21-23; ಇಬ್ರಿಯ 5:8, 9). ಆದರೆ ನಾವೇ ರಕ್ಷಣೆಯನ್ನು ಸಂಪಾದಿಸಬಹುದೆಂಬ ಸಾಧ್ಯತೆಯನ್ನು ಒಪ್ಪುತ್ತಿರುವದಿಲ್ಲ. ನಾವು ಏನೇ ಮಾಡಿದರು, ಅದು ದೇವರ ಕಾರ್ಯಕ್ಕೆ ಅದು ಸಮಾನವಾಗದು (ಲೂಕ 17:10). "ರಕ್ಷಣೆಯು ದೇವರ ಅನುಗ್ರಹವೇ ಹೊರತು ಸಂಪಾದನೆ ಮಾಡುವಂಥದ್ದಲ್ಲ."

ಕ್ರಿಯೆಗಳಿಂದ - ರಕ್ಷಣೆಯೆಂಬ ತತ್ವವನ್ನು ಪೇತ್ರನು ನಿರಾಕರಿಸಿದನು, ಏಕೆಂದರೆ ಅದು "ಹೀಗಿರುವದರಿಂದ ನಮ್ಮ ಪತ್ರಗಳಾಗಲೀ ನಾವಾಗಲೀ ಹೊರಲಾರದ ನೊಗವನ್ನು ನೀವು ಶಿಷ್ಯರ ಹೆಗಲಿನ ಮೇಲೆ ಹಾಕಿ ದೇವರನ್ನು ಪರೀಕ್ಷಿಸುವದು ಯಾಕೆ?" (15:10). ಮೋಶೆಯು ನೇಮಗಳನ್ನು ಪೂರ್ಣವಾಗಿ ಪಾಲಿಸುವದು ಅಸಾಧ್ಯ ಎಂದು, ಯಥಾರ್ಥವಾದ ಯೆಹೂದ್ಯನು

ಸಹ ಹೇಳುವನು, ಆದೇ ರೀತಿಯಲ್ಲಿ ಯಥಾರ್ಥವಾದ ಕ್ರೈಸ್ತನು ಸಹ ಕ್ರಿಸ್ತನ ಅಪ್ಪಣೆಗಳನ್ನು ಪೂರ್ಣವಾಗಿ ಪಾಲಿಸುವದು ಅಸಾಧ್ಯ ಎಂದು ಹೇಳಿಕೊಳ್ಳಲೇಬೇಕು.[42] ನಾವು ಉತ್ತಮವಾದದ್ದನ್ನು ಮಾಡಿದ್ದೆವೆಂದು ಹೇಳಿದರೂ, ನಾವು ಅಪೂರ್ಣರೇ (ರೋಮಾಪುರ 3:23; 7:15). ನಾವು ಪ್ರತಿಯೊಂದು ನಿಯಮಗಳಿಗೂ ಪೂರ್ಣವಾಗಿ ವಿಧೇಯರಾಗದ ಹೊರತು ದೇವರು ನಮ್ಮನ್ನು ರಕ್ಷಿಸುವದಿಲ್ಲ ಎಂದು ನಂಬಿದರೆ, ನಾವು ಸಂಕಟಗೊಳಗಾಗಿ ನಾಶವಾಗುತ್ತೇವೆ. ಈ ಸಿದ್ಧಾಂತವನ್ನು ಅಂಗೀಕರಿಸುವವನು, ಯಾವಾಗಲೂ ಪಾಪ ಪ್ರಜ್ಞೆಯ ಹೊರೆಯನ್ನು ಹೊತ್ತಿರುವರು. ಎಂಥಾ ಹೀನವಾದ ಮನುಷ್ಯನು ನಾನು "ಇದರಿಂದ ನನಗೆ ಬಿಡುಗಡಕೊಡುವವರು ಯಾರು ... ?" (ರೋಮಾಪುರ (7:24). ದೇವರು ನಮ್ಮಲ್ಲಿ ಪೂರ್ಣತೆಯನ್ನು ನೋಡದೇ ಹೃದಯವನ್ನೇ ನೋಡುವನು ಎಂಬ ಪೇತ್ರನ ಸಂದೇಶವು ನಮಗೆ ಹೆಚ್ಚಾದ ಸ್ವಾತಂತ್ರ್ಯವನ್ನು ನೀಡುವದಿಲ್ಲವೇ (ಅಪೊಸ್ತಲರ ಕೃತ್ಯಗಳು 15:8, 9)!

ದೇವರ ಚಿತ್ತವನ್ನೇ ಮೇಲಾಗಿ ಮಾಡುವಂಥ ನಂಬಿಕೆಯನ್ನು ದೇವರು ನೋಡುತ್ತಾನೆ (ಗಲಾತ್ಯ 5:6; ರೋಮಾಪುರ 1:5; ಯಾಕೋಬ 2:26). ವೈಕ್ತಿಕವಾಗಿ ಕಾರಣ ನೀಡುವವರು, "ನಾನು ನನ್ನನ್ನೇ ರಕ್ಷಿಸಿಕೊಳ್ಳಲಾರೆ; ದೇವರ ಕೃಪೆಯಿಂದಲೇ ರಕ್ಷಿಸಲ್ಪಟ್ಟಿದ್ದೇನೆ; ಆದ್ದರಿಂದ ದೇವರಿಗೆ ವಿಧೇಯನಾಗುವ ಅಗತ್ಯತೆಯಿಲ್ಲ ಎಂದು ಹೇಳುವುದಾದರೆ," ರಕ್ಷಣೆಯ ನಂಬಿಕೆಯನ್ನು ಕಳೆದುಕೊಂಡುವನಾಗಿ, ದೇವರ ಮುಂದೆ ಯಥಾರ್ಥವಾದ ಹೃದಯವನ್ನು ಹೊಂದಿರುವದಿಲ್ಲ. ಕೃಪೆಯಿಂದ ದೊರಕುವ ರಕ್ಷಣೆಯು ವಿಧೇಯತೆಯನ್ನು ನಿರಾಕರಿಸುವದಿಲ್ಲ; ಆದರೆ ಅದು ನಮ್ಮನ್ನು ಭಯದ ಬಂಧನದಿಂದ ವಿಮುಕ್ತಿಗೊಳಿಸುತ್ತದೆ ಮತ್ತು ಪಾಪದ ಬಂಧನದಿಂದಲೂ ಬಿಡಿಸುತ್ತದೆ.

ಯಾರಾದರು, ನಾನು ರಕ್ಷಣೆಹೊಂದಲು ಪರಿಪೂರ್ಣನಾಗ ಬೇಕೆಂದು ಪ್ರಕಟಿಸಿಕೊಳ್ಳುವುದಾದರೆ, ನನ್ನ ಪ್ರಕಾರ, ಅವನು ರಕ್ಷಣೆಯು ಬಾಗಿಲನ್ನು ಮುಚ್ಚುವವನಾಗಿರುತ್ತಾನೆ. ಯಾಕಂದರೆ ನಾನು ಎಷ್ಟೇ ಒಳ್ಳೆಯದನ್ನು ಮಾಡಿದ್ದರೂ ನಾನು ಪಾಪಿ ಮನುಷ್ಯನೇ. ಕ್ರಿಯೆಗಳಿಂದ - ರಕ್ಷಣೆ ಎಂದು ಬಾಗಿಲನ್ನು ಮುಚ್ಚುವವರಿಂದ ದೇವರು ನಮ್ಮನ್ನು ಸ್ವತಂತ್ರ್ಯಗೊಳಿಸಲಿ!

## ಮುಕ್ತಾಯ

ನಮ್ಮ ಮುಂದಿರುವ ಎರಡು ಪಾಠಗಳಲ್ಲಿ, ಭಿನ್ನಾಭಿಪ್ರಾಯ ಹೊಂದಿದ ಸಹೋದರರು ಕೆಲವು ಸಾರಿ ಕಾದಾಡುತ್ತಾರೆ ಕೆಲವುಸಾರಿ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಕ್ರಿಸ್ತನಲ್ಲಿ ನಮಗೆ ದೊರಕಿರುವ ಸ್ವಾತಂತ್ರವನ್ನು ಕಿತುಕೊಳ್ಳಲು ಯಾರಾದರು ಪ್ರಯತ್ನಮಾಡಿದರೆ, ಆಗ ನಾವು ಸತ್ಯಕ್ಕಾಗಿ ಹೋರಾಟಮಾಡಬೇಕು. ಸುಳ್ಳು ಪ್ರವಾದಿಗಳು, ಅಂತಿಯೋಕ್ಯಕ್ಕೆ ಬಂದು ದೇವರು ಅನ್ಯರಿಗೆ ಅನುಗ್ರಹಿಸಿದ ನಂಬಿಕೆಯ ಬಾಗಿಲನ್ನು ಮುಚ್ಚಲು ಪ್ರಯತ್ನಿಸಿದಾಗ, "ಪೌಲ ಬಾರ್ನಬರು ಬಹುವಾದ ವಿವಾದವನ್ನು ಮಾಡಿದರು" (15:2). ಪೌಲನು ಹೇಳಿದ್ದೇನೆಂದರೆ "ಸುವಾರ್ತೆಯ ಸತ್ಯಾರ್ಥವು ನಿಮ್ಮಲ್ಲಿ ಸ್ಥಿರವಾಗಿರಬೇಕೆಂದು ನಾವು ಅವರಿಗೆ ವಶವಾಗುವದಕ್ಕೆ ಒಂದುಗಳಿಗೆ ಹೊತ್ತಾದರೂ ಸಮ್ಮತಿಸಲಿಲ್ಲ" (ಗಲಾತ್ಯ 2:5).

ಒಂದು ಮಧ್ಯಾಹ್ನ ಜನವರಿ 1, 1863ರಲ್ಲಿ ಅಬ್ರಾಹಮ್ ಲಿಂಕ್‌ನ್‌ರವರ ಕಾರ್ಯದರ್ಶಿಯಾದ ವಿಲಿಯಮ್ ಸ್ಟೀವಾರ್ಟ್‌ರವರು. ಒಂದು ವಿಮೋಚನೆಯ ಕರಾರು[43] ಪತ್ರಕ್ಕೆ ಸಹಿ ಹಾಕಿಸಿಕೊಳ್ಳಲು ಬಂದರು. ಲಿಂಕನ್‌ರವರು ತಮ್ಮ ಲೇಖನಿಯನ್ನು ಎರಡುಸಾರಿ ಎತ್ತಿಕೊಂಡು, ಅದನ್ನು ಪ್ರತಿಸಲ ಕೆಳಗಿಡುತ್ತಿದ್ದರು. ನಂತರ ಅವರು ಸ್ಟೀವಾರ್ಟ್‌ರವರಿಗೆ, "ಮುಂಜಾನೆಯಿಂದ 9:00 ಇದುವರೆಗೆ ನಾನು ಜನರ ಕೈ ಕುಲುಕುತ್ತಿರುವದರಿಂದ, ನನ್ನ ಬಲಗೈ ಸ್ವಾದಕಳಕೊಂಡಿದೆ ಎಂದು ಹೇಳಿದರು. ನನ್ನ ಹೆಸರು, ಚರಿತ್ರೆಯಲ್ಲಿ, ಸ್ಥಿರಗೊಳ್ಳಬೇಕಾದರೆ, ಅದಕ್ಕೆ ಕಾರಣ ಈ ದಾಖಲೆಯಾಗುತ್ತದೆ ಎಂದರು. ನಾನು ನಡುಗುತ್ತಿರುವ ಕೈಗಳಿಂದ

ಈ ದಾಖಲೆಗೆ ಈಗ ಸಹಿಮಾಡಿದರೆ, ಮುಂದೊಂದು ದಿನ ಈ ದಾಖಲೆಯನ್ನು ಪರಿಶೀಲಿಸುವಾಗ, ಜನರು ನನ್ನ ಸಹಿಯನ್ನು ನೋಡಿ." ಲಿಂಕನ್ನನ ಹೃದಯವು ಈ ಕಾರ್ಯಕ್ಕೆ ಸಮ್ಮತಿ ನೀಡದೆ ಇದ್ದದ್ದರಿಂದ, ಸಹಿಮಾಡಲು ಹಿಂಜರಿದರು ಎಂದು ಹೇಳುವರು. ಅದ್ದರಿಂದ ನನ್ನ ಕೈಗಳು ದೃಢವಾಗುವವರೆಗೆ ನಾನು ಸಹಿಮಾಡುವದಿಲ್ಲ ಎಂದು ಹೇಳಿದರು. ತರುವಾಯ ಅವರ ಕೈಗಳು ದೃಢವಾದಾಗ, ತಮ್ಮ ಕೈಗಳಿಂದ ಲೇಕನಿಯನ್ನು ತೆಗದುಕೊಂಡು ಈ ದೇಶದ ಸಕಲನಾಗರೀಕರು ಇಂದಿನಿಂದ ಸ್ವತಂತ್ರರು ಎಂಬ ದಾಖಲೆಗೆ ನಿಧಾನವಾಗಿಯೂ ದೃಢವಾಗಿಯೂ ಸಹಿಮಾಡಿದರು.[44]

ಅಪೊಸ್ತಲರ ಕೃತ್ಯಗಳು 15ರ ಸಮ್ಮೇಳನವನ್ನು ಪರಿಶೀಲಿಸುವಾಗ, ಮನುಷ್ಯರೆಲ್ಲರೂ ಕ್ರಿಸ್ತನಲ್ಲಿ ಸ್ವತಂತ್ರರೂ ಎಂದು ಪೇತ್ರ, ಪೌಲ, ಬಾರ್ನಬ ಹಾಗೂ ಯಾಕೋಬರು ಧೈರ್ಯವಾಗಿ ಪ್ರಕಟಿಸಿದರು. ಮನುಷ್ಯರು ನಮ್ಮ ಜೀವಿತಗಳನ್ನು ಪರಿಶೀಲಿಸುವಾಗ, ಆತ್ಮೀಕ ಸ್ವಾತಂತ್ರವನ್ನು ದೃಢವಾಗಿ ಘೋಷಿಸಲಿ ಎಂಬದು ನನ್ನ ಪ್ರಾರ್ಥನೆಯಾಗಿದೆ![45]

## ಪ್ರಸಂಗದ ಟಿಪ್ಪಣಿಗಳು

ವಾರೆನ್ ವೆಸ್ಬೀಯವರು ಅಪೊಸ್ತಲರ ಕೃತ್ಯಗಳು 15:1-35ವರೆಗಿನ ವಾಕ್ಯ ಭಾಗವನ್ನು, ಅಂಗ್ಲ ಭಾಷೆಯ ಮೂರು ಡಿ ಡಿ ಗಳಲ್ಲಿ ವಿವರಿಸಿರುವರು (1) ವಾದ (ವಚನಗಳು 1-5), (2) ಪರಿಹಾರ ಅಥವಾ ಪ್ರತಿವಾದ (ವಚನಗಳು 6-18), ಮತ್ತು ನಿರ್ಣಯ (ವಚನಗಳು 19-35). ಎರಡನೇ ಭಾಗದಲ್ಲಿ, ಪೇತ್ರನು ಕಳೆದು ಹೋದ ವಿಷಯವನ್ನು ಪುನರಾವರ್ತಿಸಿದರು (ವಚನಗಳು 6-11), ಪೌಲ ಬಾರ್ನಬರು ವರ್ತಮಾನದ ಕಾರ್ಯವನ್ನು ತಿಳಿಸಿದರು (ವಚನ 12), ಯಾಕೋಬನು ಭವಿಷ್ಯದ ವಿಷಯವನ್ನು ತಿಳಿಸಿದನು (ವಚನಗಳು 13-18).

ತೀತನ ಕುರಿತು ಹೆಚ್ಚಿನ ಪ್ರಸಂಗವನ್ನು ಮಾಡಬಹುದು, "ಲೂಕನು ನೆನಪು ಮಾಡದೆ ಇದ್ದ ಮನುಷ್ಯನು" ಎಂಬ ವಿಷಯ. ತೀತನ ಸೇವೆಯ ಕುರಿತು ಟಿಪ್ಪಣೆಯನ್ನು ನೋಡಿರಿ. ಪೌಲನ ಪತ್ರಿಕೆಯಲ್ಲಿರುವ ಅವನ ವಿಷಯವನ್ನು ಗಮನಿಸಬಹುದು.

ಟಿಪ್ಪಣೆಗಳು

[1]ಎತ್ತರವಾಗಿರು ಗುಡ್ಡೆಯಂತಿರುವ ರಸ್ತೆ ತಡೆ. [2]ಅವರ ಪ್ರಯಾಣವು ತುರ್ತಾಗಿ ಅಂತ್ಯಗೊಂಡ ಕುರಿತು, ಇದರಲ್ಲಿರುವ ಕಥೆಯನ್ನೆ ಹೇಳಬಹುದು. [3]ಕೆಲವು ಯೆಹೂದ್ಯರು ನಂಬಿದರು (14:1), ಆದರೆ ಅಲ್ಲಿನ ಸಭೆಯು ಬಹುಮಂದಿ ಅನ್ಯರನ್ನೇ ಒಳಗೊಂಡಿತ್ತು. [4]ಪೌಲ ಬಾರ್ನಬರ ಪ್ರಥಮ ಸೇವಾ ಪ್ರಯಾಣದಲ್ಲಿ ಸ್ಥಾಪಿತಗೊಂಡಿರ ಬಹುದಾದ ಸಭೆಗಳ ಬಗ್ಗೆ ತಿಳಿಸಿರುವದಿಲ್ಲ. [5]"ಮುಚ್ಚು" ಎಂದರೆ, ಬಾಗಿಲನು ಜೋರಾಗಿ ಹಾಕು ಎಂಬ ಅರ್ಥ "ಮುಚ್ಚು" ಎಂಬದು ಬಲವಾದ ಪದವಾಗಿರುವದರಿಂದ, ಅದನ್ನು ಬಳಸಿರುವೆನು. [6]ಅನೇಕ ಪಂಡಿತರುಗಳು, ಆ ಎರಡು ಘಟನೆಗಳು ಒಂದೇ ಎಂದು ತಿಳಿಯುತ್ತಾರೆ, ಆದರೆ ಇನ್ನೂ ಕೆಲವು ಪಂಡಿತರು ಗಲಾತ್ಯ 2:1-10 ಪೌಲನು ಸಹಾಯಕ್ಕಾಗಿ ತಂದಿದನು ಎಂದು ಬರೆದಿರುವರು (11:30; 12:25). ಉದಾಹರಣೆಗೆ J. W. ರಾಬರ್ಟ್ ನನಗೆ ಅಪೊಸ್ತಲರ ಕೃತ್ಯವನ್ನು ಉಪದೇಶಿ ಸುವಾಗ, ಗಲಾತ್ಯ 2 ಮತ್ತು ಅಪೊಸ್ತಲರ ಕೃತ್ಯಗಳು 15 ಒಂದೇ ಘಟನೆ ಎಂದು ಹೇಳಿದರು. ನಂತರ ಅವರು ಅಪೊಸ್ತಲರ ಕೃತ್ಯದಲ್ಲಿರುವ ಮತ್ತೆರಡು ಪುಸ್ತಕವನ್ನು ಬರೆದಾಗ, ಗಲಾತ್ಯ 2:1-10, ಪೌಲನ ಯೆರೂಸಲೇಮಿನ ಭೇಟಿಗಿಂತ ಮೊದಲೆ ಅದದ್ದು ಎಂದಿರುವರು. [7]W. F. Farrar, *The Life and Work of St. Paul,* vol. 1 (London: Cassell, Petter, Galpin & Co., 1879), 406, n., quoted in J. W. McGarvey, *New Commentary on Acts of Apostles,* vol. 2, (Delight, Ark.: Gospel Light Publishing Co., n.d. ), 57. [8]ಅಪೊಸ್ತಲರ ಕೃತ್ಯಗಳು 15ರಲ್ಲಿ ಪೌಲನ ಯೆರೂಸಲೇಮಿನ ಮೂರನೆಯ ಬೇಟಿಯಾಗಿತ್ತು ಗಲಾತ್ಯ 2ರಲ್ಲಿ ಎರಡನೆಯ ಭೇಟಿ. ಹಾಗೂ ಪೌಲನು ಇದನ್ನು ಹೇಳಿರುವದಿಲ್ಲ "ಆದರೆ ಹದಿನಾಲ್ಕು ವರ್ಷಗಳ ನಂತರ ಅವನ ಪರಿವರ್ತನೆಯ

ನಂತರದ ವರ್ಷಗಳು ಪುನಃ" ಎಂಬದು ಅವನು ಅದನ್ನು ಸಂಧಿಸಿರಬಹುದು ಎಂಬ ಸೂಚನೆಯಾಗಿದೆ (12:25), ಆ ಸಮಯದಲ್ಲಿ ಅಪೊಸ್ತಲರನ್ನು ಸಂದಿಸುವ ಅವಕಾಶವಾಗಿರಲಿಲ್ಲ (ಅಥವಾ ಅವನು ಸೆರೆಮನೆಯಲ್ಲಿರಬಹುದು). [9]ಗಲಾತ್ಯದ 2ರ ಎಲ್ಲವನ್ನು ನಾನು ವಿವರಿಸುವದಿಲ್ಲ. [10]ಯೂದಾಯದವರು ಏಕೆ ಅಂತಿಯೋಕ್ಯ, ಸಭೆಯನ್ನು ಸಂಧಿಸಿದರು ಎಂಬುದಕ್ಕಾಗಿ ನಾನು ಈ ಪದಪ್ರಯೋಗ ಮಾಡಿರುವೆನು. ಅವರು ಹೋದ ಕಾರಣವನ್ನು ಲೂಕನು ತಿಳಿಸದೆ ಇರುವದರಿಂದ, ಅದನ್ನು ನಾವೂ ಸಹ ಅರಿಯೆವು.

[11]ಕೊರ್ನೇಲಿಯನು ದೇವ ಭಯ ಹೊಂದಿದ್ದನು. ಅಂತಿಯೋಕ್ಯದವರಲ್ಲಿ, ಯೆಹೂದ್ಯರ ವರ್ಚಸ್ಸು ಬಹಳ ಹೆಚ್ಚಾಗಿತ್ತು (11:19-21; 13:1) ಪೌಲನಿಂದ ಪರಿವರ್ತನೆಗೊಂಡ ಅನೇಕರು ಯೆಹೂದ್ಯರ ಪ್ರಭಾವವನ್ನು ಹೊಂದಿದ್ದರು. ಅನ್ಯರಲ್ಲಿದ್ದ ದೈವ ಭಕ್ತಿಯಿಲ್ಲದ ಸ್ವಭಾವವು (ಕೊರಿಂಥದಲ್ಲಿದ್ದಂತೆ) - ಯೆಹೂದ್ಯ ಕ್ರಿಸ್ತರು ಏಕೆ ಭಯಪಟ್ಟರು ಎಂದು ತಿಳಿಸುತ್ತದೆ. [12]ಅಮೆರಿಕೆಯ "ಮುರಿದುಹೋದ ಆತ್ಮಿಕ ಮನೆ" ಎಂಬ ಹೇಳಿಕೆಯು ಈ ಅಂಶವನ್ನು ಸ್ಪಷ್ಟ ಪಡಿಸುತ್ತದೆ. [13]ಮೆಸ್ಟರ್ನ್ ಟಿಕ್ಸ್ ವಚನ 1ನ್ನು ಹೊಂದಿರುತ್ತದೆ. ವಿಶ್ವಾಸಿಗಳಾದ ಫರಿಸಾಯರು. [14]ಪರಿವರ್ತನೆಗೊಳ್ಳುವ ಮೊದಲು, ಪೌಲನು ಫರಿಸಾಯನಾಗಿದ್ದನು ಎಂದು ಅಭ್ಯಾಸ ಮಾಡಿ ದ್ದೇವೆ. 23:6ರವರೆಗೆ ಲೂಕನು ಈ ವಿಚಾರವನ್ನು ತಿಳಿಸಿರುವದಿಲ್ಲ. [15]ಮೆಕ್ ಗಾರ್ವೆ, [16]ಅಪೊಸ್ತಲರ *ಅಪೊಸ್ತಲರ ಕೃತ್ಯಗಳು, 1* "ಫರಿಸಾಯ" ಎಂಬದನ್ನು ನೋಡಿರಿ. [17]ಯೆರೂಸಲೇಮಿನ "ಸಭೆಯನ್ನು" ಅನೇಕರು ತಾಯಿ ಸಭೆಯಿಂದು ಬೋಧಿಸುವರು ದೇವರೇ ಉಂಟು ಮಾಡಿದ ಸಭೆಯು ಇತರೆ ಸಭೆಗಳ ಮೇಲ್ವಿಚಾರಣೆಯನ್ನು ಮಾಡುತ್ತದೆ ಎಂಬದನ್ನು ಮರೆಯ ಬಾರದು. ಪ್ರತಿ ಸಭೆಗಳಲ್ಲಿ, ಅಪೊಸ್ತಲರು ಅನ್ಯೋನ್ಯತೆಯನ್ನು ಹೊಂದಿದ್ದರು, ಅವರು ದೇವರ ಪ್ರಕಟನೆಯ ಮೂಲವಾಗಿದ್ದರು - ಆ ಅವಕಾಶವನ್ನು ಇತರರಿಗೆ ನೀಡಲಾಗಿರುವದಿಲ್ಲ. ಯೆರೂಸಲೇಮಿನ ಸಭೆಯು, ಇತರೆ ಸಭೆಗಳ ಮೇಲ್ವಿಚಾರಣೆಯನ್ನು ಹೊಂದಿರಲಿಲ್ಲ. ಪ್ರತೀ ಸಭೆಯು ಸ್ವಂತ ಆಡಳಿತಕ್ಕೆ ಒಳಪಟ್ಟಿತ್ತು (ಯೆರೂಸಲೇಮಿನ ಸಭೆ ತಾಯಿ ಸಭೆ ಎಂಬದಕ್ಕೆ ಗಲಾತ್ಯ 4:26ರಲ್ಲಿ ಮೇಲಿನ ಯೆರೂಸಲೇಮು [ಭೂಲೋಕದ ಯೆರೂಸಲೇಮಾಗಿರದೆ, ಅದು ಪರಲೋಕವೆ] ನಮ್ಮ ಆತ್ಮೀಕ ತಾಯಿ). [18]ಅನ್ಯರಾದ ಗಂಡಸರು ಸುನ್ನತಿ ಮಾಡಿಸಿಕೊಳ್ಳುವ ಮೂಲಕ ಕ್ರೈಸ್ತರಾಗುತ್ತಿದ್ದರು ಎಂಬ ವಿಷಯವನ್ನು ಅಪೊಸ್ತಲರ *ಅಪೊಸ್ತಲರ ಕೃತ್ಯಗಳು, 1* ನೀಡಲಾಗಿದೆ. [19]ಅಪೊಸ್ತಲರ ಕೃತ್ಯಗಳು 15ರಲ್ಲಿರುವ ನೇಮ ಎಂಬದು, ಮೋಶೆಯ ಧರ್ಮಶಾಸ್ತ್ರವಾಗಿದೆ (ವಚನ 5). ನನ್ನ ಪಾಠದಲ್ಲಿ ಮೋಶೆಯ ಧರ್ಮಶಾಸ್ತ್ರ ಹಾಗೂ ಸಮಾನ್ಯವಾದ ನೇಮಗಳ ಬಗ್ಗೆ ಮಾತನಾಡುತ್ತೇನೆ. ಅವರೆಡರ ನಡುವಿನ ವ್ಯತ್ಯಾಸವನ್ನು ತಿಳಿಸಲು ಮೋಶೆಯ ಧರ್ಮಶಾಸ್ತ್ರ ಎಂದು, ಸಾಮಾನ್ಯ ನೇಮ ಎಂದು ಬಳಸುತ್ತೇನೆ. [20]ವಚನ 5ರ "ಅಗತ್ಯ" (ಡೈ ಎಂಬ ಪದದಿಂದ ಅನುವಾದಿಸಲಾಗಿದೆ) ಅದನ್ನು ಅಯ್ಕೆಗೆ ಒಳಪಡಿಸ ಬೇಕೆಂದು ತಿಳಿಸಿರುವದಿಲ್ಲ (ಅಪೊಸ್ತಲರ ಕೃತ್ಯಗಳು 1:21; ರೋಮಾಪುರ 13:5; ಇಬ್ರಿಯ 8:3).

[21]ಒಂದು ಕಾಲದಲ್ಲಿ ಕೆಲವರಿದ್ದರು; ಶಕ್ತಿಯುಳ್ಳ ಪ್ರೋತ್ಸಾಹದಲ್ಲಿದೆ ಪರಿಸ್ಥಿತಿಯು ಬದಲಾಗುವದು ಎಂಬದಕ್ಕೆ ಕಾರಣವಿಲ್ಲ. [22]ಗಲಾತ್ಯ 2:13 ಬಾರ್ನಬನಿಗಿಂತಲೂ, ಪೌಲನು ಬಲವಾಗಿ ನಂಬಿದ್ದನು. ಯೂದಾಯದ ಸಹೋದರರನ್ನು ಪೌಲನು ಮುಂದಾಗಿ ವಿರೋಧಿಸಿದನು, ಆದರೆ ಬಾರ್ನಬನು ಸಹ ಪ್ರತಿ ವಿರೋಧ ವ್ಯಕ್ತಪಡಿಸಿದನು ಎಂದು ವಾಕ್ಯ ತಿಳಿಸುತ್ತದೆ (ಗಲಾತ್ಯ 2:5; ಒತ್ತಿ ಹೇಳಿದ್ದು ನನ್ನದು). [23]ಅವರು ಸತ್ಯ ಕ್ರೈಸ್ತರಲ್ಲಿ ಎಂದು ಪೌಲನು ತಿಳಿಸಿದನು - ಹೊರಗಿನಿಂದ ಸಭೆಯನ್ನು ನಾಶ ಮಾಡಲು ಸಾಧ್ಯವಾಗದೆ ಇದ್ದದರಿಂದ ಒಳಗಿನಿಂದ ನಾಶಮಾಡಲು ಯತ್ನಿಸಿದರು. ಅಪೊಸ್ತಲರ ಕೃತ್ಯಗಳು 15:5ರ ಪ್ರಕಾರ ಹೊಂದಾಣಿಕೆ ಮಾಡಿಕೊಳ್ಳಲು ಕೆಲವು ತೊಡಕುಗಳಿವೆ, ಪೌಲನನ್ನು ಎದುರಿಸಿದ ಫರಿಸಾಯರು ಸಹ "ನಂಬಿದವರಾಗಿದ್ದರು." ಅದು ಸತ್ಯವಾದ ಪರಿವರ್ತನೆಗೆ ಸೂಚನೆಯಾಗಿದೆ. ಅದರ ಪೂರ್ಣವಿವರ ಲಭ್ಯವಿಲ್ಲದ ಕಾರಣ, ಆ ವಿಷಯವನ್ನು ಕರ್ತನ ಕೈಗೆ ಸಮರ್ಪಿಸಬೇಕು. ಆತನು ಎಲ್ಲಾರ ಹೃದಯವನ್ನು ಅರಿತಿರುವನು (ಅಪೊಸ್ತಲರ ಕೃತ್ಯಗಳು 15:8). ಅವರು ಯಥಾರ್ಥ ಕ್ರೈಸ್ತರೋ ಅಥವಾ ಅಲ್ಲವೋ ಎಂಬದನ್ನು ಆತನೇ ತಿಳಿದಿರುವನು. [24]ಯೆರೂಸಲೇಮಿನ ಸಭೆಯ ನಿರ್ಣಯವು ಪೌಲನ ಸ್ಥಾನವನ್ನು ದೃಢಪಡಿಸಿತು ಅದರ ಸತ್ಯವನ್ನು ಅರಿಯಲು ಪೌಲನು ಯೆರೂಸಲೇಮಿಗೆ ಹೋಗಲಿಲ್ಲ. [25]ಪೌಲನ ಜೀವನ ಕಾಲವೆಲ್ಲಾ ಅವನ ವೈರಿಗಳು ಅವನ ಅಪೊಸ್ತಲ ಸ್ಥಾನವನ್ನು ಪ್ರಶ್ನಿಸಿದರು, ಅವನು ಅದನ್ನು ಪ್ರತಿಪಾದಿಸಿದನು (2 ಕೊರಿಂಥ 10-13). [26]ಪ್ರೇರಿತವಲ್ಲದ ಸಂಪ್ರದಾಯದ ಪ್ರಕಾರ, ಲೂಕನು ಅಂತಿಯೋಕ್ಯದವನಾಗಿದ್ದನ್ನು. ತೀತನು, ಲೂಕನ ಸಹೋದರ ಎಂಬದು ಕೆಲವರ ಅಭಿಪ್ರಾಯ. ಅದು ಸತ್ಯವಾಗಿದ್ದರೆ, ತೀತನ ಕುರಿತು ಅಕೆ ಲೂಕನು ತಿಳಿಸಲಿಲ್ಲ (1) ಪೌಲನು ಅವನನ್ನೂ ಪರಿವರ್ತಿಸಿ, ಅವನಿಗೆ ಹತ್ತಿರವಾಗಿರಬಹುದು (ತೀತ 1:4). (2) ಪೌಲನ ಮೂರನೆಯ ಸೇವಾ ಪ್ರಯಾಣದಲ್ಲಿ ತೀತನು ಅವನ ಜೊತೆಕೆಲಸದವನಾಗಿರಬಹುದು (2 ಕೊರಿಂಥ 2:13; 7:13,

14; 8:6, 16, 23; 12:18). (3) ಪೌಲನು ರೋಮಾಯದ ಸೆರೆಮನೆಗೆ ಎರಡನೆಯ ಸಾರಿ ಹೋದಾಗ, ತೀತನು ಅವನ ಸಂಗಡ ಇದ್ದನು (2 ತಿಮೊಥೆ 4:10). [27]ಅಪೊಸ್ತಲರ ಕೃತ್ಯಗಳು 2ನೇ ಪುಸ್ತಕದಲ್ಲಿರುವ "ಗೋಡೆಗಳ್ನು ಒಡೆದು ಹಾಕುವ" ಎಂಬ ಪಾಠದಲ್ಲಿ, "ಪೇತ್ರನನ್ನು ಕರೆತರಲು" ದೇವರು ಕೊರ್ನೇಲಿಯನಿಗೆ ತಿಳಿಸಿದನು. ಅದು ಮತ್ತಾಯ 16:19ರ ವಾಗ್ದಾನದ ನೆರವೇಲಿಕೆಯಾಗಿದೆ. ಮುಖ್ಯವಾಗಿ *ಅಪೊಸ್ತಲರ ಕೃತ್ಯಗಳು, 2* 10:5-8ರ ಟಿಪ್ಪಣಿಯನ್ನು ನೋಡಿರಿ. [28]ಅಪೊಸ್ತಲರ *ಅಪೊಸ್ತಲರ ಕೃತ್ಯಗಳು, 2* ಅಪೊಸ್ತಲರ ಕೃತ್ಯಗಳು 10:44-48ರ ವಿವರಣೆಯನ್ನು ಮತ್ತು 11:15-18ರ ಈ ಪುಸ್ತಕದಲ್ಲಿರುವ ಟಿಪ್ಪಣಿಯನ್ನು ನೋಡಿರಿ. [29]ರೋಮಾಪುರ 3:22ರಲ್ಲಿರುವ "ವ್ಯತ್ಯಸವಿಲ್ಲ" ಎಂಬ ಪೌಲನ ಹೇಳಿಕೆಯನ್ನು ಹೋಲಿಕೆ ಮಾಡಿರಿ. [30]ಅಪೊಸ್ತಲರ ಕೃತ್ಯಗಳ ಪುಸ್ತಕ ಒಂದರ 5:9ರ ಟಿಪ್ಪಣಿಯನ್ನು ನೋಡಿರಿ.

[31]ಎತ್ತನ ಕುತ್ತಿಗೆಯ ಮೇಲೆ ನೋಗ ಇಡುವದು ಒಳ್ಳೇಯ ಉದ್ದೇಶವೇ: ಭಾರವನ್ನು ಎಳೆಯುವದಕ್ಕೆ ಸಮವಾಗಿರುತ್ತದೆ. ಆದರೆ ಪೇತ್ರನು, ಮೋಶೆಯ ನೇಮವು ಭಾರವಾದ "ನೊಗವೇ" ಎಂದು ಹೇಳಿದನು. ಅದು ಯೆಹೂದ್ಯರಿಗೆ ಭಾರವಾಗಿತ್ತು. ಯೇಸುಕ್ರಿಸ್ತನು ಆ ಬೋಧನೆಗಳನ್ನು "ನೊಗ" ಎಂದು ತಿಳಿಸಿರುವನು (ಮತ್ತಾಯ 11:30). ಆದರೆ ಆತನ ನೊಗವು ಭಾರವಾಗಿರುವದರಿಂದ, ಅದರ ಉದ್ದೇಶವನ್ನು ಈಡೇರಿಸಬಹುದು ಅದು ಭಾರವನ್ನು ಹಗುರಮಾಡುತ್ತದೆ. [32]ನೇಮಗಳಲ್ಲಿ ಯಾವದೇ ತಪ್ಪುಗಳಿರುವದಿಲ್ಲ, ಆದರೆ ಮನುಷ್ಯನು ಪರಿಪೂರ್ಣನಾಗಿ ಪಾಲಿಸಲಾರನಷ್ಟೆ. ಆದ್ದರಿಂದ ನಮಗೆ ಕೃಪೆಯ ಏರ್ಪಾಟು ಅತಿ ಅಗತ್ಯವಾಗಿದ್ದು ನೇಮಗಳ ಅಗತ್ಯವಿರುವದಿಲ್ಲ. ಯೇಸು ಮಾತ್ರ ನೇಮಗಳನ್ನು ಪರಿಪೂರ್ಣವಾಗಿ ಪಾಲಿಸಿದನು. [33]ಯಾಕೋಬನು ಯೇಸುವಿನ ಸಹೋದರನಾಗಿದ್ದನು. ಯೋಹಾನನ ಸಹೋದರನಾದ ಯಾಕೋಬನು ಸಹ ಮತ್ತೊಬ್ಬ ಪ್ರಮುಖನನ್ನು ಅಧ್ಯಾಯ 12ರಲ್ಲಿ ಅವನು ಕೊಲ್ಲಲ್ಪಟ್ಟನು. [34]ಯಾಕೋಬನ ಕಡೆಯಿಂದ ಕೆಲವರು ಬಂದು ತೊಂದರೆ ನೀಡಿದರು ಎಂದು ಸಂಬಂಧ ಕಲ್ಪಿಸಲಾಗಿದೆ ಗಲಾತ್ಯ 2:12 ಅವರು ಯಾಕೋಬನಿಂದ ಬಂದವರಾಗಿದ್ದರೆ, ಅವರು ತಮ್ಮ ಸಮರ್ಪಣೆಯನ್ನು ಮೀರಿದವರಾಗಿದ್ದರು. ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಆ ಹೆಸರನ್ನು ಬಳಸಿರಬಹುದು. [35]ಈ ಪುಸ್ತಕದಲ್ಲಿ ಮುಂದೆ ತಿಳಿಸಿರುವ 15:13-21ರ ಟಿಪ್ಪಣಿಯನ್ನು ನೋಡಿರಿ. [36]ಅಂತಿಯೋಕ್ಯ ಪ್ರದೇಶಗಳ ಸಭೆಗಳಿಗೂ ಈ ಪತ್ರಿಕೆಯನ್ನು ಬರೆಯಲಾಗಿದೆ. [37]ಈ ಪುಸ್ತಕದ ಮುಂದಿನ ಪಾಠದಲ್ಲಿರುವ ವಚನಗಳು 28, 29ನ್ನು ನೋಡಿರಿ. [38]ಸಂಪ್ರದಾಯದ ವಿರುದ್ಧ ಯೇಸು ಎಚ್ಚರಿಸುವದು ಪ್ರಮುಖವಾಗಿದೆ, ಆದರೆ ಕೆಲವರು ಅದನ್ನು ಅತಿಯಾಗಿ ಬೋಧಿಸುವರು. ನಾವು ಮನುಷ್ಯರ ಸಂಪ್ರದಾಯದಂತೆ ಯಾವಾಗಲು ಮಾಡಿರುವೆವು ಎಂದು ಸಹಜವಾಗಿ ಹೇಳುವದಕ್ಕೆ ಸಾಧ್ಯವಾಗುತ್ತದೆ. ಅನೇಕ ಆಚರಣೆಗಳ ಕುರಿತು ಇದು ಸತ್ಯವಾಗಿದೆ, ಆದರೆ ಎಲ್ಲವು ಸತ್ಯವಾಗಿರುವದಿಲ್ಲ. ಕ್ರಿಸ್ತನ ಸಭೆಗಳು ಯಾವಾಗಲು ವಾಕ್ಯವನ್ನೇ ಬೋಧಿಸುವರು, ಆದರೆ ಮನುಷ್ಯರ ಸಂಪ್ರದಾಯಗಳನ್ನು ತಳ್ಳಿಬಿಡುವದಿಲ್ಲ. ಕೆಲವು ಚಟುವಟಿಕೆಗಳನ್ನು "ಕೆಲವು ಕ್ರಮದಲ್ಲಿ ಯಾವಾಗಲೂ ಮಾಡಲಾಗುವದು" ಏಕೆಂದರೆ ಅದು ಮಾನವ ಸಂಪ್ರದಾಯವಾಗಿರದೆ, ದೈವೀಕ ಸಂಪ್ರದಾಯವಾಗಿರುತ್ತದೆ (2 ಥೆಸಲೋನಿಕ 3:6). ಸಾಮಾನ್ಯ ಕಾರ್ಯಗಳನ್ನು ಪೂರ್ಣವಾಗಿ ನುಂಗುವವರ ಕುರಿತು ಎಚ್ಚರವಾಗಿರಿ, ಅದನ್ನು "ಸಾಪ್ರದಾಯಕ" ಕಾರ್ಯ ಎಂದು ಕರೆಯುವರು. ದೇವರ ವಾಕ್ಯದ ಆಧಾರದಿಂದ ಪ್ರತಿಯೊಂದು ಸಂಪ್ರದಾಯಗಳನ್ನು ಪರಿಶೀಲಿಸಬೇಕು, ಮತ್ತು ಅದು ಮಾನವರ ಅಥವ ದೈವೀಕವಾದ ಸಂಪ್ರದಾಯವೇ ಎಂದು ಪರೀಕ್ಷಿಸಬೇಕು. [39]ಅರಣ್ಯಕಾಂಡ 11:5ರ ಇಸ್ರಾಯೇಲ್ಯರ ಮನೋಭಾವವನ್ನು ಗಮನಿಸಿರಿ. [40]ಅಂತಿಯೋಕ್ಯದಲ್ಲಿ - ಮೊದಲು ಎಂಬ ಪಾಠದಲ್ಲಿರುವ ಅಪೊಸ್ತಲರ ಕೃತ್ಯಗಳು 11:29, 30ರ ಟಿಪ್ಪಣಿನೋಡಿರಿ.

[41]ದೇವರು ಒಂದು ಕಾರ್ಯವನ್ನು ಮಾಡಲು ಹೇಳಿ, ಅದನ್ನು ಮಾಡುವ ಕ್ರಮವನ್ನು ತಿಳಿಸದೆ ಹೋದರೆ, ನಾವುಗಳೇ ಉತ್ತಮವಾದ ಕ್ರಮಗಳನ್ನು ಬಳಸಬಹುದು. [42]ಕೆಲವು ಸಾರಿ ಹಳೆಯ ಒಡಂಬಡಿಕೆಗಿಂತಲೂ, ಯೇಸುವಿನ ಅಪ್ಪಣೆ ಕಠಿಣವಾಗಿರುತ್ತದೆ (ಮತ್ತಾಯ 5). [43]ಸಕಲ ಗುಲಾಮರು ಸ್ವತಂತ್ರರು ಎಂದು ಈ ದಾಖಲೆ ಹೇಳುತ್ತದೆ. [44]ಇದು ರಿಚ್ ಅಟ್ಲೆಯವರು ನಿದರ್ಶನ "ಕೃಪಾಸ್ಥಳ." [45]ಈ ಪಾಠವನ್ನು ಪ್ರಸಂಗಿಸುವುದಾದರೆ, "ಪಾಪವು ರಕ್ಷಣೆಗೆ ಬಾಗಿಲನ್ನು ಮುಚ್ಚುವ ಪ್ರಮುಖವಾದ ಸಂಗತಿ ಎಂದು ಹೇಳಿ ಆಹ್ವಾನವನ್ನು ನೀಡಿರಿ. "ಕ್ರಿಸ್ತನಲ್ಲಿ" ಮಾತ್ರ ಸ್ವತಂತ್ರವು ಇರುವದರಿಂದ ಗಲಾತ್ಯ 3:26, 27ನ್ನು ಬಳಸಿ ಕ್ರಿಸ್ತನಲ್ಲಿ ಸೇರುವದಕ್ಕೆ ಆಹ್ವಾನ ನೀಡಿರಿ.